# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣುಕು

## 22-01-2021



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ರ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಜಯಕಿರಣ
11. ಸಂಜೆ ವಾಣಿ
12. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ಕೋವಿಡ್ ಲಸಿಕೆ: 23 ಮಂದಿಗೆ ಆರೋಗ್ಯ ಸಮಸ್ಯೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ಗುರುವಾರ ಕೋವಿಡ್ ಲಸಿಕೆ ಹಾಕಿಸಿಕೊಂಡ 23 ಮಂದಿಯಲ್ಲಿ ಸಣ್ಣ ಪ್ರಮಾಣದಲ್ಲಿ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿದೆ.

ಪಶ್ಚಿಮ ವಲಯದ ಲಸಿಕಾ ಕೇಂದ್ರಗಳಲ್ಲಿ ಲಸಿಕೆ ಹಾಕಿಸಿಕೊಂಡ 22 ಮಂದಿಯ ಮತ್ತು ದಕ್ಷಿಣ ವಲಯದ ಲಸಿಕಾ ಕೇಂದ್ರವೊಂದರಲ್ಲಿ ಲಸಿಕೆ ಪಡೆದ ಒಬ್ಬರ ಆರೋಗ್ಯದಲ್ಲಿ ಮಾತ್ರ ತುಸು ಏರುಪೇರು ಕಂಡುಬಂದಿದೆ. ಗಂಭೀರ ಸಮಸ್ಯೆಗಳು ಯಾವುವೂ ವರದಿಯಾಗಿಲ್ಲ ಎಂದು ಬಿಬಿಎಂಪಿ ತಿಳಿಸಿದೆ.

ಸರ್ಕಾರಿ ವೈದ್ಯಕೀಯ ಸಂಸ್ಥೆಗಳ 2,328 ಹಾಗೂ ಖಾಸಗಿ ವೈದ್ಯಕೀಯ ಸಂಸ್ಥೆಗಳ 8,141 ಆರೋಗ್ಯ ಕಾರ್ಯಕರ್ತರು ಸೇರಿ ಒಟ್ಟು 10,469 ಮಂದಿಗೆ ಗುರುವಾರ ಲಸಿಕೆ ಹಾಕಲು ಉದ್ದೇಶಿಸಲಾಗಿತ್ತು. ಸರ್ಕಾರಿ ಲಸಿಕಾ ಕೇಂದ್ರಗಳಲ್ಲಿ 1,027 ಹಾಗೂ ಖಾಸಗಿ ಆಸ್ಪತ್ರೆಗಳ ಲಸಿಕಾ ಕೇಂದ್ರಗಳಲ್ಲಿ 4,383 ಮಂದಿ ಲಸಿಕೆ ಹಾಕಿಸಿಕೊಂಡರು. ಗುರುವಾರ ಒಟ್ಟು 115 ಕೇಂದ್ರಗಳಲ್ಲಿ ಲಸಿಕೆ ಹಾಕಲಾಗಿದ್ದು, ಹೆಸರು ನೋಂದಾಯಿಸಿದ್ದವರಲ್ಲಿ ಶೇ 51.68 ಮಂದಿ ಮಾತ್ರ ಲಸಿಕೆ ಪಡೆದಿದ್ದಾರೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ಕೋವಿಡ್: 9.14 ಲಕ್ಷ ಮಂದಿ ಗುಣಮುಖ

ಬೆಂಗಳೂರು: ಕೋವಿಡ್ ಪೀಡಿತರಲ್ಲಿ ಗುರುವಾರ 815 ಮಂದಿ ಗುಣಮುಖರಾಗಿದ್ದಾರೆ. ಇದರಿಂದಾಗಿ ಕಾಯಿಲೆಯಿಂದ ಚೇತರಿಸಿಕೊಂಡವರ ಸಂಖ್ಯೆ 9.14 ಲಕ್ಷಕ್ಕೆ ತಲುಪಿದೆ.

ರಾಜ್ಯದಲ್ಲಿ ಹೊಸದಾಗಿ 674 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇಲ್ಲಿಯವರೆಗೆ ಸೋಂಕಿಗೀಡಾದವರ ಒಟ್ಟು ಸಂಖ್ಯೆ 9.34 ಲಕ್ಷ ದಾಟಿದೆ. ಸೋಂಕಿತರಲ್ಲಿ ಮತ್ತೆ ಇಬ್ಬರು ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,187ಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 7,554ಕ್ಕೆ ಇಳಿಕೆಯಾಗಿದ್ದು, ಸೋಂಕಿತರಲ್ಲಿ ಸದ್ಯ 171 ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಇದ್ದಾರೆ.



ಒಂದೇ ದಿನ 88 ಸಾವಿರ ಮಂದಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿದೆ. ಈ ತಿಂಗಳು 21 ದಿನಗಳಲ್ಲಿ 21.10 ಲಕ್ಷ ಮಂದಿ ಕೋವಿಡ್ ಪರೀಕ್ಷೆ ಮಾಡಿಸಿಕೊಂಡಿದ್ದಾರೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ಮನೆ ಬಾಗಿಲಿಗೆ ಶಾಲೆ



ಹೊಸ ರೂಪ ಪಡೆದಿರುವ ಬಿಎಂಟಿಸಿ ಹಳೇ ಬಸ್

ಬೆಂಗಳೂರು: ಬಿಎಂಟಿಸಿ ಹಳೇ ಬಸ್‌ಗಳಿಗೆ ಹೊಸ ರೂಪ ನೀಡಲಾಗಿದ್ದು, ಇವುಗಳ ಮೂಲಕ ಬಿಬಿಎಂಪಿಯು 'ಮನೆಯ ಬಾಗಿಲಿಗೆ ಶಾಲೆ' ಕಾರ್ಯಕ್ರಮ ರೂಪಿಸಿದೆ.

10 ಹಳೇ ಬಸ್‌ಗಳನ್ನು ಬಿಬಿಎಂಪಿ ಶಾಲೆಗಳಿಗೆ ಬಿಟ್ಟುಕೊಡಲು ಬಿಎಂಟಿಸಿ ನಿರ್ಧರಿಸಿದೆ. ಇದಕ್ಕಾಗಿ ವಿಶೇಷ ವಿನ್ಯಾಸದೊಂದಿಗೆ ಬಸ್‌ಗಳನ್ನು ಪರಿವರ್ತಿಸಲಾಗಿದೆ. ಶಾಲೆ ಬಿಟ್ಟ ಮಕ್ಕಳನ್ನು ಕರೆ ತರಲು ಈ ಬಸ್‌ಗಳನ್ನು ಬಳಕೆ ಮಾಡಲು ಬಿಬಿಎಂಪಿ ನಿರ್ಧರಿಸಿದೆ.

ತಲಾ ₹4 ಲಕ್ಷದಂತೆ ಬಿಬಿಎಂಪಿ ಬಸ್ ಖರೀದಿಸಿದೆ. ಪರಿವರ್ತನೆಗೊಂಡ ಶಾಲಾ ವಾಹನಗಳಲ್ಲಿ ವಿನೈಲ್ ಫ್ಲೋರಿಂಗ್ ಮತ್ತು ಶಿಕ್ಷಕರು ಕಲಿಸಲು ಅಗತ್ಯ ಇರುವ ಬಿಳಿ ಬೋರ್ಡ್, ಸಿಬ್ಬಂದಿಗೆ ಕುರ್ಚಿ ವ್ಯವಸ್ಥೆ ಕಲ್ಪಿಸಲಾಗಿದೆ. ಬಡ ಮಕ್ಕಳು ಶಾಲೆಯಿಂದ ಹೊರಗುಳಿಯಬಾರದು ಎಂಬ ಉದ್ದೇಶದಿಂದ ಬಿಬಿಎಂಪಿ ಸಹಯೋಗದಲ್ಲಿ ಈ ಕಾರ್ಯಕ್ರಮ ರೂಪಿಸಲಾಗಿದೆ ಎಂದು ಬಿಎಂಟಿಸಿ ತಿಳಿಸಿದೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ




ಜೆಸಿಬಿ ಮೂಲಕ ಗುಡಿಸಲು ನೆಲಸಮ ಮಾಡಿದರು (ಎಡಚಿತ್ರ) ಬಟ್ಟೆಗಳ ಗಂಟು ಹೊತ್ತು ತೆರಳುತ್ತಿರುವ ನಿರಾಶ್ರಿತರು – ಪ್ರಜಾವಾಣಿ ಚಿತ್ರಗಳು/ ಇರ್ಷಾದ್ ಮಹಮ್ಮದ್

86 ಗುಡಿಸಲು ನೆಲಸಮ ● ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ತೆರವು ಕಾರ್ಯಾಚರಣೆ

# ನಿರಾಶ್ರಿತರಾದ ಕೂಲಿ ಕಾರ್ಮಿಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಪೂರ್ವ ತಾಲ್ಲೂಕಿನ ಎನ್‌ಜಿಇಎಫ್ ಸಮೀಪದ ಕೃಷ್ಣಪ್ಪ ಲೇಔಟ್‌ನಲ್ಲಿ 30 ವರ್ಷಗಳಿಂದ ನಿರ್ಮಿಸಿಕೊಂಡಿದ್ದ 86 ಗುಡಿಸಲುಗಳನ್ನು ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳು ಗುರುವಾರ ಏಕಾಏಕಿ ತೆರವುಗೊಳಿಸಿದ್ದು, ಅಷ್ಟೂ ಕುಟುಂಬಗಳು ಬೀದಿಪಾಲಾಗಿವೆ.

ಪೊಲೀಸ್ ಬೆಂಗಾವಲಿನಲ್ಲಿ ಜೆಸಿಬಿಯೊಂದಿಗೆ ಬಂದ ಅಧಿಕಾರಿಗಳು, ನಿವಾಸಿಗಳ ಕಣ್ಣೆದುರಿನಲ್ಲೇ ಎಲ್ಲ ಗುಡಿಸಲುಗಳನ್ನು ನೆಲಸಮ ಮಾಡಿದರು.

ದಿಢೀರ್ ನಡೆದ ಕಾರ್ಯಾಚರಣೆಯಿಂದ ದಿಕ್ಕು ತೋಚದಾದ ಗುಡಿಸಲು ನಿವಾಸಿಗಳು, ಪಾತ್ರೆ, ಹಾಸಿಗೆ, ಬಟ್ಟೆ ಹಾಗೂ ಇನ್ನಿತರ ವಸ್ತುಗಳನ್ನು ಹೊತ್ತು ಸಾಗಿದರು. ಕಾರ್ಯಾಚರಣೆ ಆರಂಭವಾಗುವ ಹೊತ್ತಿಗೆ (ಬೆಳಿಗ್ಗೆ 11) ಕೆಲವರು ಕೆಲಸಕ್ಕೆ ತೆರಳಿದ್ದರು. ಮಹಿಳೆಯರು ಮತ್ತು ಮಕ್ಕಳು ಮನೆಯಲ್ಲಿದ್ದ ವಸ್ತುಗಳನ್ನು ಉಳಿಸಿಕೊಳ್ಳಲು ಪರದಾಡಿದರು.

ಗುಡಿಸಲು ತೆರವಿಗೆ ಅಡ್ಡಿಯಾದ ನಿವಾಸಿಗಳನ್ನು ಪೊಲೀಸರು ಲಾಠಿ ಹಿಡಿದು ಬೆದರಿಸಿದರು. ಸಂಜೆ ವೇಳೆಗೆ ಎಲ್ಲ ಗುಡಿಸಲುಗಳನ್ನೂ ಜೆಸಿಬಿ ಮೂಲಕ ನೆಲಸಮ ಮಾಡಲಾಯಿತು. ಮಕ್ಕಳೊಂದಿಗೆ ಬೀದಿಗೆ ತಳ್ಳಿದ ಅಧಿಕಾರಿಗಳಿಗೆ ನಿವಾಸಿಗಳು ಹಿಡಿಶಾಪ ಹಾಕಿ ಕಣ್ಣೀರಿಟ್ಟರು.

'ಅಕ್ರಮ- ಸಕ್ರಮ ಯೋಜನೆಯಡಿ ಹಕ್ಕುಪತ್ರ ನೀಡಬೇಕು ಎಂದು 30 ವರ್ಷಗಳಿಂದ ಫಾರಂ 50, 53 ಮತ್ತು 57 ಅಡಿಯಲ್ಲಿ ಅರ್ಜಿ ಸಲ್ಲಿಸುತ್ತಾ ಬಂದಿದ್ದೇವೆ. ಯಾವ ಬಡವರನ್ನೂ ಬೀದಿಪಾಲು ಮಾಡಬಾರದು ಎಂದು ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ ಮೂಲಕ ಹೋರಾಟ ಮಾಡುತ್ತಿದ್ದೇವೆ. ಅದಕ್ಕಾಗಿ 2018ರಲ್ಲಿ ಉನ್ನತ ಮಟ್ಟದ ಸಮಿತಿಯನ್ನೂ ಸರ್ಕಾರ ನೇಮಿಸಿದೆ. ಆದರೂ ಬಡವರನ್ನು ಬೀದಿಗೆ ತಳ್ಳಲಾಗಿದೆ' ಎಂದು ಕರ್ನಾಟಕ ಜನಾಂದೋಲನ ಸಂಘಟನೆ ಅಧ್ಯಕ್ಷ ಮರಿಯಪ್ಪ ಬೇಸರ ವ್ಯಕ್ತಪಡಿಸಿದರು.

'ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸೂಚನೆಯಂತೆ ಅಧಿಕಾರಿಗಳು ಬಡವರ ಮೇಲೆ ಈ ದರ್ಪ ತೋರಿದ್ದಾರೆ. ಇದು ಕ್ರೌರ್ಯದ ಪರಮಾವಧಿ' ಎಂದು ಆಕ್ರೋಶ ವ್ಯಕ್ತಪಡಿಸಿದರು.

### ಮುಖ್ಯಾಂಶಗಳು

- 30 ವರ್ಷಗಳಿಂದ ನಿರ್ಮಿಸಿಕೊಂಡಿದ್ದ ಗುಡಿಸಲು
- ತೆರವು ಕಾರ್ಯಕ್ಕೆ ನಿವಾಸಿಗಳಿಂದ ಅಡ್ಡಿ: ಲಾಠಿ ಹಿಡಿದು ಬೆದರಿಕೆ



ಕೆ.ಆರ್.ಪುರ ತಾಲ್ಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದ ನಿರಾಶ್ರಿತರು

## ನಿರಾಶ್ರಿತರ ಪ್ರತಿಭಟನೆ

ಕೆ.ಆರ್.ಪುರ: ಗುಡಿಸಲು ತೆರವು ಖಂಡಿಸಿ ಜನಾಂದೋಲನ ಸಂಘಟನೆ ನೇತೃತ್ವದಲ್ಲಿ ನಿರಾಶ್ರಿತರು ಇಲ್ಲಿನ ತಾಲ್ಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ನೋಟಿಸ್ ಕೂಡ ನೀಡದೆ ಏಕಾಏಕಿ ಗುಡಿಸಲು ನೆಲಸಮ ಮಾಡಿರುವುದು ಸರ್ಕಾರದ ದೌರ್ಜನ್ಯ ಎಂದು ದೂರಿದರು.

'ಪೂರ್ವ ತಾಲ್ಲೂಕು ಭೈರಸಂದ್ರ ಗ್ರಾಮದ ಸರ್ವೆನಂ 83ರಲ್ಲಿ ಬಿಇಎಂಎಲ್ ಜಾಗದಲ್ಲಿ 450ಕ್ಕೂ ಹೆಚ್ಚು ಕುಟುಂಬಗಳು ಮೂವತ್ತು ವರ್ಷಗಳಿಂದ ಗುಡಿಸಲು ಕಟ್ಟಿಕೊಂಡು ವಾಸ ಮಾಡುತ್ತಿದ್ದವು. 450 ಕುಟುಂಬಗಳ ಪೈಕಿ ಮಾರತ್ತಹಳ್ಳಿಯಲ್ಲಿ 300 ಕುಟುಂಬಗಳಿಗೆ ಕೊಳೆಗೇರಿ ಅಭಿವೃದ್ಧಿ ಮಂಡಳಿಯಿಂದ ಮನೆ ನಿರ್ಮಿಸಿಕೊಡಲಾಗಿದೆ. ಉಳಿದವರಿಗೆ ಮನೆಗಳಿಲ್ಲ. ಈಗ ಏಕಾಏಕಿ ತೆರವು ಮಾಡಲಾಗಿದೆ' ಎಂದು ಆರೋಪಿಸಿದರು.

'ವಯಸ್ಸಾದವರು, ಮಹಿಳೆಯರು ಮತ್ತು ಮಕ್ಕಳು ಎನ್ನುವುದನ್ನೂ ನೋಡದೆ ಗುಡಿಸಲಿನಿಂದ ಎಳೆದು ಹಾಕಿದ್ದಾರೆ. ತಡೆಯಲು ಯತ್ನಿಸಿದರೆ ಪೊಲೀಸರು ಹಲ್ಲೆಗೆ ಯತ್ನಿಸಿದರು. ಪ್ರಕರಣ ದಾಖಲಿಸುವ ಬೆದರಿಕೆ ಹಾಕಿದರು' ಎಂದು ನಿರಾಶ್ರಿತರಾದ ನಾಗಮ್ಮ ಅಳಲು ತೋಡಿಕೊಂಡರು.

'ನಿರಾಶ್ರಿತರಿಗೆ ಬದಲಿ ವ್ಯವಸ್ಥೆ ಮಾಡಬೇಕು. ಮಾರತ್ತಹಳ್ಳಿಯಲ್ಲಿ ನಿರ್ಮಿಸಿರುವ ಮನೆಗಳನ್ನು ನೀಡಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು' ಎಂದು ಎಚ್ಚರಿಸಿದರು.

ಕನ್ನಡಪ್ರಭ

# 2ನೇ ಹಂತದಲ್ಲಿ ಲಸಿಕೆ ನೀಡಲು ಪಾಲಿಕೆ ಸಿದ್ಧತೆ

## ಕೊರೋನಾ ವಾರಿಯರ್ಸ್ ಪಟ್ಟಿ ಸಿದ್ಧತಾ ಕಾರ್ಯ ಆರಂಭ: ಆಯುಕ್ತ ಮಂಜುನಾಥ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ಮೊದಲ ಹಂತದಲ್ಲಿ ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್ ಲಸಿಕೆ ಅಭಿಯಾನದ ಬಳಿಕ ಇದೀಗ ಎರಡನೇ ಹಂತದ ಕೋವಿಡ್ ವಾರಿಯರ್ಸ್‌ಗಳಾದ ಶಿಕ್ಷಕರು, ಪೊಲೀಸರು, ಕಂದಾಯ ಇಲಾಖೆ ಹಾಗೂ ಇತರೆ ಇಲಾಖೆಯ ಸಿಬ್ಬಂದಿಗೆ ಕೋವಿಡ್ ಲಸಿಕೆ ಪಡೆಯುವವರ ಪಟ್ಟಿ ಸಿದ್ಧಪಡಿಸುವ ಪ್ರಕ್ರಿಯೆಯನ್ನು ಬಿಬಿಎಂಪಿ ಆರಂಭಿಸಿದೆ.

ಕಳೆದ ಆರು ದಿನಗಳಿಂದ ಬಿಬಿಎಂಪಿ ವ್ಯಾಪ್ತಿಯಲ್ಲಿ ಸರ್ಕಾರಿ ಮತ್ತು ಖಾಸಗಿ ಆರೋಗ್ಯ ಸಂಸ್ಥೆಗಳ ಸಿಬ್ಬಂದಿಗೆ ಕೋವಿಡ್ ಲಸಿಕಾ ಅಭಿಯಾನ ನಡೆಸಲಾಗುತ್ತಿದೆ. ಈವರೆಗೆ 1.82 ಲಕ್ಷ ಆರೋಗ್ಯ ಕಾರ್ಯಕರ್ತರು ಲಸಿಕೆ ಪಡೆಯಲು ನೋಂದಣಿ ಮಾಡಿಕೊಡಿದ್ದರು. ಈ ಪೈಕಿ ಸುಮಾರು 22 ಸಾವಿರ ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ. ಇನ್ನುಳಿದಂತೆ ಮೊದಲ ಹಂತದ ಕೋವಿಡ್ ಲಸಿಕೆ ಹಾಕುವ ಕಾರ್ಯ ಮುಂದುವರೆಯುತ್ತಿದೆ. ಈ ನಡುವೆ ಬಿಬಿಎಂಪಿ ಕೇಂದ್ರ ಸರ್ಕಾರದ ಸೂಚನೆಯಂತೆ ಎರಡನೇ ಹಂತದಲ್ಲಿ ಕೋವಿಡ್ ನಿಯಂತ್ರಣಾ ಕಾರ್ಯದಲ್ಲಿ ತೊಡಗಿಸಿಕೊಂಡ ಪೊಲೀಸ್, ಅಬಕಾರಿ, ಸಾರಿಗೆ ಇಲಾಖೆ, ಶಿಕ್ಷಕರು, ಅಂಗನವಾಡಿ ಕಾರ್ಯಕರ್ತರು, ಬಿಬಿಎಂಪಿ ಅಧಿಕಾರಿ ಹಾಗೂ ಸಿಬ್ಬಂದಿ ಸೇರಿದಂತೆ ಇನ್ನಿತರ ಕೋವಿಡ್ ವಾರಿಯರ್ಸ್‌ಗಳ ಪಟ್ಟಿ ಸಿದ್ಧಪಡಿಸಲಾಗುತ್ತಿದೆ.

**ನಾಡಿದ್ದು ಸ್ಪಷ್ಟ ಚಿತ್ರಣ:** ಈ ಕುರಿತು 'ಕನ್ನಡಪ್ರಭ'ದೊಂದಿಗೆ ಮಾತನಾಡಿದ ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್, 2ನೇ ಹಂತದಲ್ಲಿ ಲಸಿಕೆ ಪಡೆದುಕೊಳ್ಳುವವರ ದಾಖಲಾತಿ ನಡೆಯುತ್ತಿದೆ. ಜ.24ಕ್ಕೆ ನಗರದಲ್ಲಿ 2ನೇ ಹಂತದ ಕೋವಿಡ್ ವಾರಿಯರ್ಸ್ ಸಂಖ್ಯೆ ತಿಳಿಯಲಿದೆ. ಎರಡನೇ ಹಂತದಲ್ಲಿ ಕೋವಿಡ್ ಲಸಿಕೆ ಹಾಕುವುದಕ್ಕೆ ಬೇಕಾದ ವ್ಯವಸ್ಥೆ ಸಿದ್ಧವಾಗಿದೆ. ದಾಸಪ್ಪ ಆಸ್ಪತ್ರೆಯಿಂದ ಬಿಬಿಎಂಪಿಯ 148 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಲಸಿಕೆ ಸರಬರಾಜು ಮಾಡಲಾಗುತ್ತದೆ ಎಂದರು.

### ಈವರೆಗೆ ಲಸಿಕೆ ಪಡೆದ 23 ಮಂದಿಗೆ ಅಡ್ಡ ಪರಿಣಾಮ

ನಗರದಲ್ಲಿ ಗುರುವಾರ 23 ಸರ್ಕಾರಿ ಹಾಗೂ ಪಾಲಿಕೆಯ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು 92 ಖಾಸಗಿ ಆಸ್ಪತ್ರೆಗಳ ಲಸಿಕಾ ಕೇಂದ್ರದಲ್ಲಿ 5,410 ಆರೋಗ್ಯ ಕಾರ್ಯಕರ್ತರು ಕೋವಿಡ್ ಲಸಿಕೆ ಪಡೆದಿದ್ದು, ಈ ಪೈಕಿ 23 ಮಂದಿಯಲ್ಲಿ ಲಸಿಕೆಯ ಅಡ್ಡ ಪರಿಣಾಮ ಕಾಣಿಸಿಕೊಂಡಿದೆ.

ಗುರುವಾರ ಸರ್ಕಾರಿ ಮತ್ತು ಬಿಬಿಎಂಪಿಯ 2,328 ಮಂದಿ ಹಾಗೂ ಖಾಸಗಿ ಆಸ್ಪತ್ರೆಯ 8,141 ಮಂದಿ ಸೇರಿದಂತೆ ಒಟ್ಟು 10,469 ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು.

ಈ ಪೈಕಿ ಸರ್ಕಾರಿ ಹಾಗೂ ಪಾಲಿಕೆಯ 1,027 ಹಾಗೂ ಖಾಸಗಿ ಆಸ್ಪತ್ರೆಯ 4,383 ಆರೋಗ್ಯ ಕಾರ್ಯಕರ್ತರು ಸೇರಿದಂತೆ ಒಟ್ಟು 5,410 (ಶೇ.52) ಮಂದಿ ಮಾತ್ರ ಲಸಿಕೆ ಪಡೆದುಕೊಂಡಿದ್ದಾರೆ. ಲಸಿಕೆ ಪಡೆದುಕೊಂಡವರಲ್ಲಿ 23 ಮಂದಿಗೆ ಜ್ವರ, ತಲೆನೋವು, ಸುಸ್ತು ಸೇರಿದಂತೆ ಇನ್ನಿತರೆ ಅಡ್ಡಪರಿಣಾಮ ಕಾಣಿಸಿಕೊಂಡಿದೆ ಎಂದು ಬಿಬಿಎಂಪಿ ತಿಳಿಸಿದೆ.



ಕೋವಿಡ್ ಲಸಿಕೆ ಪಡೆದ ಕೆಲವರಲ್ಲಿ ಜ್ವರ ಹಾಗೂ ಮೈಕೈ ನೋವು ಲಕ್ಷಣಗಳು ಕಾಣಿಸಿಕೊಂಡಿವೆ. ಉಳಿದಂತೆ ಯಾರಿಗೂ ಹೆಚ್ಚಿನ ತೊಂದರೆ ಆಗಿಲ್ಲ.

• **ಎನ್. ಮಂಜುನಾಥ್ ಪ್ರಸಾದ್**
ಬಿಬಿಎಂಪಿ ಆಯುಕ್ತ

ಕನ್ನಡಪ್ರಭ

# ತ್ಯಾಜ್ಯ ವಿಲೇವಾರಿ ವಾಹನಗಳಿಗೆ ಜಿಪಿಎಸ್

## ಎಲ್ಲೆಂದರಲ್ಲಿ ಕಸ ಎಸೆಯುವುದನ್ನು ತಪ್ಪಿಸಲು, ನಗರದ ಸ್ವಚ್ಛತೆ ಕಾಪಾಡಲು ಮಾಲಿನ್ಯ ನಿಯಂತ್ರಣ ಮಂಡಳಿ ಮಾಸ್ಟರ್ ಪ್ಲ್ಯಾನ್

## ಈಗಾಗಲೇ 68 ವಾಹನಗಳಿಗೆ ಜಿಪಿಎಸ್ | ಜಿಪಿಎಸ್ ಜತೆಗೆ ಅವುಗಳ ಮೇಲೆ ಕಣ್ಣಿಡಲು ಕಮಾಂಡ್ ಸೆಂಟರ್ ತೆರೆಯಲು ಸೂಚನೆ

• **ಎನ್.ಎಲ್. ಶಿವಮಾದು**
**ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ಅಕ್ರಮ ತ್ಯಾಜ್ಯ ವಿಲೇವಾರಿಗೆ ಕಡಿವಾಣ ಹಾಕಲು ಮುಂದಾಗಿರುವ ಮಾಲಿನ್ಯ ನಿಯಂತ್ರಣ ಮಂಡಳಿಯು (ಕೆಎಸ್‌ಪಿಸಿಬಿ) ನಗರದಲ್ಲಿ ತ್ಯಾಜ್ಯ ವಿಲೇವಾರಿ ಮಾಡುತ್ತಿರುವ ಪ್ರತಿ ವಾಹನಗಳಿಗೂ ಜಿಪಿಎಸ್ ಅಳವಡಿಸುವಂತೆ ಮತ್ತು ವಾಹನಗಳ ಸಂಚಾರದ ಮೇಲೆ ಕಣ್ಣಿಡಲು ಕಮಾಂಡ್ ಸೆಂಟರ್ ತೆರೆಯುವಂತೆ ಬಿಬಿಎಂಪಿಗೆ ನಿರ್ದೇಶನ ನೀಡಿದೆ.

ನಗರದಲ್ಲಿ ಎಲ್ಲೆಂದರಲ್ಲಿ ಅಕ್ರಮವಾಗಿ ಕಸ ವಿಲೇವಾರಿ ಮಾಡುವುದನ್ನು ತಡೆಯುವುದಕ್ಕಾಗಿ ಹಾಗೂ ನಗರದ ಸ್ವಚ್ಛತೆ ಕಾಪಾಡುವ ದೃಷ್ಟಿಯಿಂದ ತ್ಯಾಜ್ಯ ವಿಲೇವಾರಿ ವಾಹನಗಳಿಗೆ ಜಿಪಿಎಸ್ ಅಳವಡಿಸುವಂತೆ ಪತ್ರ ಬರೆದಿದೆ.

ತ್ಯಾಜ್ಯ ವಿಲೇವಾರಿಗಾಗಿ ಈಗಾಗಲೇ ಬಿಬಿಎಂಪಿ ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ. ಹೀಗಿದ್ದರೂ ಅಕ್ರಮವಾಗಿ ನಗರದ ಕೆರೆಗಳಲ್ಲಿ, ರಸ್ತೆ ಬದಿ, ಹೊರ ವಲಯದ ವರ್ತುಲ ರಸ್ತೆಗಳು, ಖಾಲಿ ಜಾಗಗಳಲ್ಲಿ ರಾತ್ರೋರಾತ್ರಿ ಕಸ ವಿಲೇವಾರಿ ಮಾಡುತ್ತಿರುವ ಘಟನೆಗಳು ಎಗ್ಗಿಲ್ಲದೆ ನಡೆಯುತ್ತಲೇ ಇವೆ. ಕೆರೆಗಳ ಪಕ್ಕದಲ್ಲಿ ಕಸ ವಿಲೇವಾರಿ ಮಾಡುವ ಮೂಲಕ ಕೆಲವೆಡೆ ಕೆರೆಗಳನ್ನು ಒತ್ತುವರಿ ಮಾಡುವ ಪ್ರಯತ್ನಗಳು ಕೂಡ ನಡೆಯುತ್ತಿವೆ. ಇದನ್ನು ಪತ್ತೆ ಹಚ್ಚುವುದಕ್ಕಾಗಿ ಸಾಕಷ್ಟು ಕ್ರಮ ಕೈಗೊಂಡಿದ್ದರೂ ರಾತ್ರಿ ವೇಳೆ ಕಸ ಸುರಿಯುತ್ತಿರುವುದರಿಂದ ಪತ್ತೆ ಹಚ್ಚಲು ಅಧಿಕಾರಿಗಳಿಗೆ ಕಷ್ಟವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಸ ವಿಲೇವಾರಿ ವಾಹನಗಳಿಗೆ ಜಿಪಿಎಸ್ ಅಳವಡಿಸಿದರೆ ಸುಲಭವಾಗಿ ಕಂಡುಹಿಡಿಯಬಹುದು ಎಂಬುದು ಚಿಂತನೆ.



> ನಗರದಲ್ಲಿ ಹಲವೆಡೆ ಕೆಲವು ವಾಹನಗಳು ನಿಗದಿತ ಸ್ಥಳದಲ್ಲಿ ತ್ಯಾಜ್ಯ ವಿಲೇವಾರಿ ಮಾಡದೆ, ಎಲ್ಲೆಂದರಲ್ಲಿ ಸುರಿಯುತ್ತಿರುವ ಪ್ರಕರಣಗಳು ಕಂಡುಬರುತ್ತಿವೆ. ಅಕ್ರಮವಾಗಿ ಕಸ ಸುರಿಯುವುದನ್ನು ತಡೆಗಟ್ಟುವ ಉದ್ದೇಶದಿಂದ ತ್ಯಾಜ್ಯ ವಿಲೇವಾರಿ ವಾಹನಗಳಿಗೆ ಜಿಪಿಎಸ್ ಅಳವಡಿಸುವಂತೆ ಸೂಚಿಸಿ ಬಿಬಿಎಂಪಿಗೆ ಪತ್ರ ಬರೆಯಲಾಗುತ್ತಿದೆ.
>
> • **ಶ್ರೀನಿವಾಸುಲು** ಮಂಡಳಿ ಸದಸ್ಯ ಕಾರ್ಯದರ್ಶಿ, ಕೆಎಸ್‌ಪಿಸಿಬಿ

**ಈಗಾಗಲೇ 68 ವಾಹನಗಳಿಗೆ ಜಿಪಿಎಸ್:** ಸದ್ಯ ಬಿಬಿಎಂಪಿ ವ್ಯಾಪ್ತಿಯಲ್ಲಿ 4,500 ಆಟೋಗಳು ಹಾಗೂ 611 ಕಾಂಪ್ಯಾಕ್ಟರ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಈ ಪೈಕಿ ಇತ್ತೀಚೆಗೆ ಅರ್ಕಾವತಿ ಮತ್ತು ವೃಷಭಾವತಿ ಕಾಲುವೆಗಳಿಗೆ ರಾತ್ರೋರಾತ್ರಿ ಅನಧಿಕೃತವಾಗಿ ಟ್ಯಾಂಕರ್‌ಗಳ ಮೂಲಕ ತ್ಯಾಜ್ಯ ಹರಿಸುತ್ತಿರುವುದನ್ನು ತಡೆಯಲು 68 ವಾಹನಗಳಿಗೆ ಜಿಪಿಎಸ್ ಅಳವಡಿಕೆ ಮಾಡಿದೆ. ಜಿಪಿಎಸ್ ತಂತ್ರಜ್ಞಾನದ ಮೂಲಕ ಮಂಡಳಿಯ ಕಂಟ್ರೋಲ್ ಆ್ಯಂಡ್ ಕಮಾಂಡ್ ಸೆಂಟರ್‌ನ ಮೂಲಕ ನಿಗಾ ವಹಿಸಲಾಗುತ್ತದೆ. ಕೈಗಾರಿಕಾಗಳ ಕಲುಷಿತ ನೀರನ್ನು ಸಿಇಟಿಪಿ ಘಟಕಗಳಿಗೆ ಸಾಗಣೆ ಮಾಡುವ ಹಾಗೂ ಅಪಾಯಕಾರಿ ತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕವಾಗಿ ದಹನ ಮಾಡುವ ಘಟಕಗಳಿಗೆ ಕೈಗಾರಿಕೆಗಳಿಂದ ಉತ್ಪತ್ತಿಯಾಗುವ ಅಪಾಯಕಾರಿ ತ್ಯಾಜ್ಯ ವಸ್ತುಗಳನ್ನು ಸಾಗಣೆ ವಾಹನಗಳಿಗೂ ಜಿಪಿಎಸ್ ಅಳವಡಿಸಿಕೊಂಡಿದೆ. ಅಕ್ರಮ ಕಂಡು ಬಂದಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ. ಇದೇ ಮಾದರಿಯಲ್ಲಿ ಬಿಬಿಎಂಪಿಗೂ ಪತ್ರ ಬರೆಯಲಾಗುತ್ತಿದೆ ಎಂದು ಮಂಡಳಿ ಸದಸ್ಯ ಕಾರ್ಯದರ್ಶಿ ಶ್ರೀನಿವಾಸುಲು ತಿಳಿಸಿದ್ದಾರೆ.

### ನ್ಯಾಯಾಲಯ ಸೂಚಿಸಿದ್ರೂ ಕ್ರಮವಿಲ್ಲ

ಕೆರೆಗಳು ಕಲುಷಿತವಾಗುತ್ತಿರುವುದನ್ನು ತಡೆಗಟ್ಟಲು ಹಾಗೂ ಘನ ತ್ಯಾಜ್ಯ ವಿಲೇವಾರಿ ಮಾಡುವವರ ಮೇಲೆ ಕ್ರಮ ಜರುಗಿಸುವುದಕ್ಕಾಗಿ ಸಿಸಿಟಿವಿ ಕ್ಯಾಮರಾ ಅಳವಡಿಸುವುದು, ಮಾರ್ಷಲ್‌ಗಳ ನೇಮಕ ಸೇರಿದಂತೆ ವಿವಿಧ ಕ್ರಮಗಳನ್ನು ಕೈಗೊಳ್ಳುವಂತೆ ಹೈಕೋರ್ಟ್ ಸೂಚಿಸಿದ್ದರೂ ಇಲ್ಲಿಯವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂಬುದು ತಿಳಿದು ಬಂದಿದೆ. ಕೆಲವು ಕಡೆ ಮಾತ್ರ ನೆಪಮಾತ್ರಕ್ಕೆ ಮಾರ್ಷಲ್‌ಗಳನ್ನು ನೇಮಕ ಮಾಡಲಾಗಿದ್ದು, ಇಲ್ಲಿಯವರೆಗೂ ಯಾರೊಬ್ಬರ ಮೇಲೂ ಪ್ರಕರಣಗಳನ್ನು ಕೂಡ ದಾಖಲಿಸಿರುವ ಉದಾಹರಣೆಗಳಿಲ್ಲ.

# ಸಕ್ರಿಯ ಸೋಂಕಿತರ ಸಂಖ್ಯೆ 4997ಕ್ಕೆ ಇಳಿಕೆ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಗುರುವಾರ 371 ಹೊಸ ಕೊರೋನಾ ಸೋಂಕು ಪ್ರಕರಣ ಪತ್ತೆಯಾಗಿದ್ದು, 509 ಮಂದಿ ಗುಣಮುಖರಾಗಿದ್ದಾರೆ. ಒಬ್ಬ ವ್ಯಕ್ತಿ ಮೃತಪಟ್ಟ ವರದಿಯಾಗಿದೆ. ಈ ಮೂಲಕ ಈವರೆಗೆ ಒಟ್ಟು ಸೋಂಕಿತರ ಸಂಖ್ಯೆ 3,96,140ಕ್ಕೆ ಏರಿಕೆಯಾಗಿದ್ದು, ಗುಣಮುಖರ ಸಂಖ್ಯೆ 3,86,769ಕ್ಕೆ ತಲುಪಿದೆ. ಇನ್ನು ಸಕ್ರಿಯ ಸೋಂಕಿತರ ಸಂಖ್ಯೆ 4,997ಕ್ಕೆ ಇಳಿಕೆಯಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಕನ್ನಡಪ್ರಭ Fri, 22 January
https://kpepaper

ಕನ್ನಡಪ್ರಭ

# 26ರಂದು ಬಿಬಿಎಂಪಿ ಶಿಕ್ಷಕರಿಗೆ ತರಬೇತಿ

ಬೆಂಗಳೂರು: ಬಿಬಿಎಂಪಿ ಶಾಲಾ-ಕಾಲೇಜುಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಳ, ಶಾಲಾ ನಿರ್ವಹಣೆಯಲ್ಲಿ ಸುಧಾರಣೆಗೆ ಬಿಬಿಎಂಪಿ ಎಲ್ಲ ಮುಖ್ಯ ಶಿಕ್ಷಕರು ಮತ್ತು ಪ್ರಾಚಾರ್ಯರಿಗೆ ಜ.26 ರಂದು 'ಆಡಳಿತ ನಿರ್ವಹಣೆ ತರಬೇತಿ ಕಾರ್ಯಾಗಾರ' ಆಯೋಜಿಸಲಾಗಿದೆ. ಈ ಕುರಿತು ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಬಿಬಿಎಂಪಿ ಶಿಕ್ಷಣ ವಿಭಾಗದ ಸಹಾಯಕ ಆಯುಕ್ತ ನಾಗೇಂದ್ರ ನಾಯ್ಕ, ರಾಜ್ಯ ಶಿಕ್ಷಣ ಇಲಾಖೆಯ ಶಿಕ್ಷಣ ಸುಧಾರಣೆಗಳ ಸಲಹೆಗಾರ ಪ್ರೊ.ಎಂ.ಆರ್. ದೊರೆಸ್ವಾಮಿ ನೇತೃತ್ವದಲ್ಲಿ ಬಿಬಿಎಂಪಿಯ ಶಾಲಾ-ಕಾಲೇಜುಗಳ ಮುಖ್ಯ ಶಿಕ್ಷಕರು ಮತ್ತು ಪ್ರಾಚಾರ್ಯರಿಗೆ ಆಡಳಿತ ನಿರ್ವಹಣೆ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸಮನ್ವಯತೆ, ಶಾಲಾ ನಿರ್ವಹಣೆಯಲ್ಲಿ ಪಾಲಕರ ಸಹಭಾಗಿತ್ವ, ಶಾಲಾ ದಾಖಲಾತಿ ಮತ್ತು ಹಾಜರಾತಿ ಹೆಚ್ಚಳದ ಕುರಿತು ಮಾಹಿತಿ ನೀಡಲಾಗುತ್ತದೆ ಎಂದರು.

ಕನ್ನಡಪ್ರಭ Fri, 22 Januar
https://kpepap

ಕನ್ನಡಪ್ರಭ

**ಪ್ರಯೋಗ** ಲಸಿಕೆಗೆ ಜನರ ಹಿಂದೇಟು ಹಿನ್ನೆಲೆ

# 2ನೇ ಹಂತ: ಪ್ರಧಾನಿ, ಸಿಎಂಗಳಿಗೆ ಲಸಿಕೆ?

## 50 ದಾಟಿದ ಜನಪ್ರತಿನಿಧಿಗಳಿಗೆ ನೀಡುವ ಸಂಭವ ಲಸಿಕೆ ಬಗ್ಗೆ ವಿಶ್ವಾಸ ಮೂಡಿಸಲು ಕೇಂದ್ರ ಕಸರತ್ತು

**ನವದೆಹಲಿ:** ಕೊರೋನಾ ಲಸಿಕೆ ಪಡೆಯಲು ಕೆಲ ರಾಜ್ಯಗಳಲ್ಲಿ ಆರೋಗ್ಯ ಕಾರ್ಯಕರ್ತರು ಹಿಂದೇಟು ಹಾಕುತ್ತಿರುವುದರಿಂದ ಲಸಿಕೆಯ ಬಗ್ಗೆ ವಿಶ್ವಾಸ ಮೂಡಿಸಲು 2ನೇ ಹಂತದಲ್ಲಿ ಪ್ರಧಾನಿ ಹಾಗೂ 50 ವರ್ಷ ದಾಟಿದ ಎಲ್ಲಾ ಮುಖ್ಯಮಂತ್ರಿಗಳು, ಸಂಸದರು ಮತ್ತು ಶಾಸಕರು ಲಸಿಕೆ ಹಾಕಿಸಿ ಕೊಳ್ಳುವ ಸಾಧ್ಯತೆಯಿದೆ.

ಸದ್ಯ ಮೊದಲ ಹಂತದ ಲಸಿಕೆ ನೀಡಿಕೆ ಪ್ರಗತಿಯಲ್ಲಿದೆ. ಈ ಹಂತ ದಲ್ಲಿ 3 ಕೋಟಿ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡಲಾಗುತ್ತಿದೆ. ಆದರೆ, ಕೆಲವೆಡೆ ಆರೋಗ್ಯ ಕಾರ್ಯಕರ್ತರು ಹಾಗೂ ವೈದ್ಯರು ಭೀತಿಯಿಂದ ಲಸಿಕೆ ಹಾಕಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ. 13



**6 ದಿನದಲ್ಲಿ ಹತ್ತು ಲಕ್ಷ ಜನರಿಗೆ ಲಸಿಕೆ: ಭಾರತದಿಂದ ವಿಶ್ವದಾಖಲೆ**

ಪುಟ 13

# 2ನೇ ಹಂತದಲ್ಲಿ ಪ್ರಧಾನಿ, ಸಿಎಂ, ಸಂಸದರಿಗೆ ಲಸಿಕೆ?

ಮೊದಲ ಪುಟದಿಂದ

ಈ ಹಂತ ಮುಗಿದ ಮೇಲೆ 2ನೇ ಹಂತದಲ್ಲಿ 50 ವರ್ಷ ಮೇಲ್ಪಟ್ಟ ಹಾಗೂ ಅನಾರೋಗ್ಯದಿಂ ದ ಬಳಲುತ್ತಿರುವ ಸುಮಾರು 27 ಕೋಟಿ ಜನರಿಗೆ ಲಸಿಕೆ ಹಾಕಲು ನಿರ್ಧರಿಸಲಾಗಿದೆ. ಆ ವೇಳೆ ಪ್ರಧಾನಿ, ಮುಖ್ಯಮಂತ್ರಿಗಳು ಹಾಗೂ ಜನಪ್ರತಿನಿಧಿಗಳಿಗೆ ಲಸಿಕೆ ಹಾಕುವ ಸಾಧ್ಯತೆಯಿದೆ ಎಂದು ಮೂಲಗಳು ಹೇಳಿವೆ. ಲಸಿಕೆ ವಿತರಣೆಯ ಸಿದ್ಧತಾ ಸಭೆಯಲ್ಲೇ ಹರ್ಯಾಣ, ಬಿಹಾರ ಹಾಗೂ ತೆಲಂಗಾಣದ ಮುಖ್ಯಮಂತ್ರಿಗಳು ಶಾಸಕರು ಹಾಗೂ ಸಂಸದರನ್ನೂ ಮುಂಚೂಣಿ ಕಾರ್ಯಕರ್ತರೆಂದು ಪರಿಗಣಿಸಿ ಲಸಿಕೆ ಹಾಕಬೇಕೆಂದು ಕೋರಿದ್ದರು. ಆದರೆ, ಯಾರೂ ಕ್ಯೂ ಹಾರುವಂತಿಲ್ಲ ಎಂದು ಪ್ರಧಾನಿ ಮೋದಿ ಕಟ್ಟುನಿಟ್ಟಾಗಿ ಹೇಳಿದ್ದರು.

VK
ವಿಜಯ ಕರ್ನಾಟಕ

# ಬೊಮ್ಮನಹಳ್ಳಿ ಪಾಲಿಕೆ ಕಚೇರಿಗೆ ಮುತ್ತಿಗೆ

**ಬೆಂಗಳೂರು ದಕ್ಷಿಣ:** ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆರೋಪಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಬಿಬಿಎಂಪಿ ಬೊಮ್ಮನಹಳ್ಳಿ ಕಚೇರಿಗೆ ಮುತ್ತಿಗೆ ಹಾಕಲಾಯಿತು.

''ಅಧಿಕಾರಿಗಳು ರಾಜಕಾರಣಿಗಳ ಕೈಗೊಂಬೆಯಂತೆ ಕೆಲಸ ಮಾಡುತ್ತಿದ್ದಾರೆ. ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಗಮನ ಕೊಡುತ್ತಿಲ್ಲ,'' ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ನಗರ ಜಿಲ್ಲಾ ಸಂಚಾಲಕ ಬೇಗೂರು ಮುನಿರಾಜ್ ಆಕ್ಷೇಪಿಸಿದರು. ಸಮಿತಿಯ ರಾಜ್ಯ ಸಂಚಾಲಕ ಹೆಣ್ಣೂರು ಶ್ರೀನಿವಾಸ್ ಮತ್ತಿತರರು ಇದ್ದರು.

VK
ವಿಜಯ ಕರ್ನಾಟಕ

### ನಗರದ ಸೈಕಲ್ ಬಳಕೆದಾರರ ಸಂಖ್ಯೆ 1.50 ಲಕ್ಷಕ್ಕೂ ಹೆಚ್ಚು

## ವರ್ಷಾಂತ್ಯಕ್ಕೆ 100 ಕಿ.ಮೀ ಪಥ ನಿರ್ಮಿಸುವ ಗುರಿ

# ಸೈಕಲ್ ತುಳಿಯಲು 70 ಕಿ.ಮೀ ಹಾದಿ




**ಈ ರಸ್ತೆಗಳಲ್ಲಿ ಸೈಕಲ್ ಪಥ ನಿರ್ಮಾಣ**

- ಸಿಲ್ಕ್‌ಬೋರ್ಡ್‌ನಿಂದ ಸ್ವಾಮಿ ವಿವೇಕಾನಂದ ರಸ್ತೆ **16.92** ಕಿ.ಮೀ
- ಸ್ವಾಮಿ ವಿವೇಕಾನಂದ ರಸ್ತೆಯಿಂದ ದೊಮ್ಮಲೂರು ಮೇಲ್ಸೇತುವೆ **2.59** ಕಿ.ಮೀ
- ದೊಮ್ಮಲೂರು ಮೇಲ್ಸೇತುವೆಯಿಂದ ಹೊಸೂರು ರಸ್ತೆ 5.40 ಕಿ.ಮೀ
- ಹಳೆ ಮದ್ರಾಸ್ ರಸ್ತೆಯಿಂದ ಡಿ.ಭಾಸ್ಕರನ್ ರಸ್ತೆ **5.37** ಕಿ.ಮೀ
- ಸ್ವಾಮಿ ವಿವೇಕಾನಂದ ರಸ್ತೆಯಿಂದ ಟ್ರಿನಿಟಿ ಚರ್ಚ್ ರಸ್ತೆ **1.98** ಕಿ.ಮೀ
- ಎಸಿಎಸ್ ಜಂಕ್ಷನ್‌ನಿಂದ ದೊಮ್ಮಲೂರು ಮೇಲ್ಸೇತುವೆ **2.53** ಕಿ.ಮೀ
- ಡಿ.ಭಾಸ್ಕರನ್ ರಸ್ತೆಯಿಂದ ಎಸಿಎಸ್ ಜಂಕ್ಷನ್ **647.32** ಮೀ.



■ **ನಾಗಪ್ಪ ನಾಗನಾಯಕನಹಳ್ಳಿ** ಬೆಂಗಳೂರು
nagappa.narayanappa@timesgroup.com

ಕೊರೊನಾ ಸೋಂಕು ಲಗ್ಗೆ ಇಟ್ಟ ಬಳಿಕ ಬೆಂಗಳೂರು ನಗರದಲ್ಲಿ ಸೈಕಲ್‌ನಲ್ಲಿ ಓಡಾಡುವವರ ಸಂಖ್ಯೆ ತುಸು ಜಾಸ್ತಿಯಾಗಿದೆ. ಪರಿಸರಸ್ನೇಹಿಯಾಗಿರುವ ಸೈಕಲ್ ಬಳಕೆಯನ್ನು ಉತ್ತೇಜಿಸಲು ಬಿಬಿಎಂಪಿ 70 ಕಿ.ಮೀ ಉದ್ದದ ಸೈಕಲ್ ಪಥ ನಿರ್ಮಿಸುತ್ತಿದೆ.

ಹೊರವರ್ತುಲ ರಸ್ತೆಯ ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೆ.ಆರ್.ಪುರದ ಲೌರಿ ಜಂಕ್ಷನ್ ವರೆಗೆ ಎರಡೂ ಬದಿಯ ಸರ್ವೀಸ್ ರಸ್ತೆಯಲ್ಲಿ 32 ಕಿ.ಮೀ ಉದ್ದದ ಪ್ರತ್ಯೇಕ ಸೈಕಲ್ ಪಥ ನಿರ್ಮಾಣ ಕಾಮಗಾರಿಯನ್ನು ಕೈಗೊಂಡಿದೆ. ಇದೇ ಮಾರ್ಗದಲ್ಲಿ ಸುಸಜ್ಜಿತ ಪಾದಚಾರಿ ಮಾರ್ಗವನ್ನೂ ನಿರ್ಮಾಣ ಮಾಡಲಾಗುತ್ತಿದೆ. ಇದಕ್ಕಾಗಿ 51.86 ಕೋಟಿ ರೂ. ವ್ಯಯಿಸಲಾಗುತ್ತಿದೆ. ಎರಡನೇ ಹಂತದಲ್ಲಿ 38 ಕಿ.ಮೀ ಉದ್ದದ ಪಥ ನಿರ್ಮಿಸಲು ಯೋಜನೆ ರೂಪಿಸಲಾಗಿದೆ. 2021ರ ಅಂತ್ಯಕ್ಕೆ 100 ಕಿ.ಮೀ ಉದ್ದದ ಸೈಕಲ್ ಪಥ ನಿರ್ಮಿಸಲು ಉದ್ದೇಶಿಸಲಾಗಿದೆ.



ನಗರದಲ್ಲಿ 1.50 ಲಕ್ಷಕ್ಕಿಂತ ಹೆಚ್ಚು ಮಂದಿ ನಿತ್ಯ ಸೈಕಲ್ ಬಳಸುತ್ತಿದ್ದಾರೆ. ಕೊರೊನಾ ಸೋಂಕು ಕಾಣಿಸಿಕೊಂಡ ಬಳಿಕ ಈ ಸಂಖ್ಯೆ ಮತ್ತಷ್ಟು ಹೆಚ್ಚಾಗಿದೆ. ಬಿಬಿಎಂಪಿಯು ಕನಿಷ್ಠ 2 ಸಾವಿರ ಕಿ.ಮೀ ಉದ್ದದ ಸೈಕಲ್ ಪಥ ನಿರ್ಮಿಸಬೇಕು. ಸೈಕಲ್ ಪಥದಲ್ಲಿ ಸಂಚರಿಸುವ ವಾಹನಗಳಿಗೆ ದಂಡ ಹಾಕುವ ವ್ಯವಸ್ಥೆ ಜಾರಿಗೆ ತರಬೇಕು.

– **ಸತ್ಯಶಂಕರನ್** ಬೈಸಿಕಲ್ ಮೇಯರ್

ಮೊದಲ ಹಂತದಲ್ಲಿ 32 ಕಿ.ಮೀ ಉದ್ದದ ಪಥ ನಿರ್ಮಿಸಲಾಗುತ್ತಿದೆ. ನಗರ ಭೂಸಾರಿಗೆ ನಿರ್ದೇಶನಾಲಯವು(ಡಲ್ಟ್) ರೂಪಿಸಿರುವ ವಿನ್ಯಾಸದಂತೆ ಹೊರವರ್ತುಲ ರಸ್ತೆಯ ಇಕ್ಕೆಲಗಳಲ್ಲಿ 1.5 ಮೀಟರ್ ಅಗಲದ ಸೈಕಲ್ ಪಥ ನಿರ್ಮಿಸಲಾಗುತ್ತಿದೆ. ಈ ಪಥಕ್ಕೆ ಇತರೆ ವಾಹನಗಳು ನುಗ್ಗುವುದನ್ನು ತಡೆಯಲು ಬೊಲ್ಲಾರ್ಡ್ಸ್‌ಗಳನ್ನು ಹಾಕಲಾಗುತ್ತಿದೆ. ಸದ್ಯ ಸೆಂಟ್ರಲ್ ಸಿಲ್ಕ್‌ಬೋರ್ಡ್‌ನಿಂದ ಇಬ್ಬಲೂರುವರೆಗೆ ಸೈಕಲ್ ಪಥ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಲೇನ್ ಮಾರ್ಕಿಂಗ್, ಮಾರ್ಗಸೂಚಿ ಫಲಕಗಳನ್ನೂ ಅಳವಡಿಸಲಾಗುತ್ತಿದೆ. ಏಪ್ರಿಲ್ ಅಂತ್ಯದ ವೇಳೆಗೆ 32 ಕಿ.ಮೀ ಉದ್ದದ ಪಥ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿ, ಸೈಕಲ್ ಸವಾರರಿಗೆ ಮುಕ್ತಗೊಳಿಸಲು ತೀರ್ಮಾನಿಸಲಾಗಿದೆ.

ಇದಲ್ಲದೆ, ಸ್ಮಾರ್ಟ್‌ಸಿಟಿ ಯೋಜನೆಯಡಿ ಕೈಗೊಂಡಿರುವ ಟೆಂಡರ್ ಶ್ಯೂರ್ ರಸ್ತೆಗಳು, ವೈಟ್ ಟಾಪಿಂಗ್ ರಸ್ತೆಗಳಲ್ಲೂ ಸೈಕಲ್ ಸವಾರರಿಗೆ ಪ್ರತ್ಯೇಕ ದಾರಿ ಮಾಡಿ ಕೊಡಲಾಗುತ್ತಿದೆ. ಈ ಹಿಂದೆ ಟೆಂಡರ್ ಶ್ಯೂರ್ ಮಾದರಿಯಡಿ ಅಭಿವೃದ್ಧಿಪಡಿಸಿದ್ದ ರೆಸಿಡೆನ್ಸಿ ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ, ಕಬ್ಬನ್ ರಸ್ತೆಯಲ್ಲೂ ಸೈಕಲ್‌ಗಳ ಓಡಾಟಕ್ಕೆ ಪಥ ನಿರ್ಮಿಸಲಾಗಿದೆ.

ಆದರೆ, ಪೂರ್ಣ ರಸ್ತೆಯಲ್ಲಿ ಪಥ ಇಲ್ಲ. ಕೆಲ ವರ್ಷಗಳ ಹಿಂದೆ ಜಯನಗರದಲ್ಲಿ 40 ಕಿ.ಮೀ ಉದ್ದದ ಸೈಕಲ್ ಪಥ ನಿರ್ಮಿಸಲಾಗಿತ್ತು. ಇಲ್ಲಿ ಕೇವಲ ಲೇನ್ ಮಾರ್ಕಿಂಗ್ ಅಷ್ಟೇ ಹಾಕಲಾಗಿತ್ತು.

»12

VK ವಿಜಯ ಕರ್ನಾಟಕ

# ಸೈಕಲ್ ತುಳಿಯಲು 70 ಕಿ.ಮೀ. ಹಾದಿ

» ನಮ್ಮ ಮೊದಲ ಪುಟದಿಂದ

ಈ ಪಥದಲ್ಲಿ ಕಾರು, ದ್ವಿಚಕ್ರ ವಾಹನ ಗಳ ಸಂಚಾರ ನಿರ್ಬಂಧಿಸಲು ಸಾಧ್ಯವಾಗಿರಲಿಲ್ಲ. ಹೀಗಾಗಿ, ಸಾರ್ವಜನಿಕರಿಂದ ಸಕಾರಾತ್ಮಕ ಸ್ಪಂದನೆ ಸಿಗಲಿಲ್ಲ. ಕ್ರಮೇಣ ಆ ರಸ್ತೆಗಳಲ್ಲಿ ಮರು ಡಾಂಬರೀಕರಣ ಕಾಮಗಾರಿ ಕೈಗೊಂಡಿದ್ದರಿಂದ ಸೈಕಲ್ ಪಥವು ಅಳಿಸಿ ಹೋಗಿದೆ. ಸಿಲ್ಕ್ ಬೋರ್ಡ್‌ನಿಂದ ಕೆ.ಆರ್.ಪುರಂ ವರೆಗಿನ ಹೊರವರ್ತುಲ ರಸ್ತೆಯು ಸದಾ ವಾಹನ ದಟ್ಟಣೆಯಿಂದ ಕೂಡಿರುತ್ತದೆ. ಈ ಮಾರ್ಗದಲ್ಲಿ ಹೆಚ್ಚಿನ ಐಟಿ-ಬಿಟಿ ಕಂಪನಿ ಗಳಿದ್ದು, ಸಾವಿರಾರು ಮಂದಿ ಸಂಚರಿಸು ತ್ತಾರೆ. ಈ ರಸ್ತೆಯಲ್ಲಿ ಸೈಕಲ್ ಸವಾರಿಗೆ ಉತ್ತೇಜನ ನೀಡಲು ಪ್ರತ್ಯೇಕ ಪಥ ನಿರ್ಮಿಸಬೇಕೆಂದು ಟೆಕ್ಕಿಗಳೇ ಬೇಡಿಕೆ ಇಟ್ಟಿ ದ್ದರು. ಹೀಗಾಗಿ, ಡಲ್ಟ್‌ನ ಸಹಭಾಗಿತ್ವದಲ್ಲಿ ಯೋಜನೆ ರೂಪಿಸಿ, ಕಾರ್ಯಗತಗೊಳಿಸಲಾಗುತ್ತಿದೆ.



ಕೆಐಎನ ದಕ್ಷಿಣ ರನ್‌ವೇಗೆ ಇತ್ತೀಚೆಗೆ ಅಳವಡಿಸಿರುವ ಅತ್ಯಾಧುನಿಕ 'ಇನ್‌ಸ್ಟ್ರುಮೆಂಟ್ ಲ್ಯಾಂಡಿಂಗ್ ಸಿಸ್ಟಂ ಕೆಟಗರಿ 3ಬಿ' ಬಳಸಿ ಇಂಡಿಗೋ ಏರ್‌ಲೈನ್ಸ್ ವಿಮಾನ ಗುರುವಾರ ಬೆಳಗ್ಗೆ 7.41ಕ್ಕೆ ಸುರಕ್ಷಿತ ಲ್ಯಾಂಡಿಂಗ್ ಮಾಡಿದೆ. 200 ಮೀಟರ್‌ನಷ್ಟು ಮಾತ್ರ ಗೋಚರತೆ ಇದ್ದ ಕಾರಣ ಲಖನೌನಿಂದ ಬಂದ ವಿಮಾನದ ಪೈಲಟ್ ಐಎಲ್‌ಎಸ್ ಬಳಕೆ ಮಾಡಿಕೊಂಡು ಲ್ಯಾಂಡಿಂಗ್ ಮಾಡಿದರು.

VK
ವಿಜಯ ಕರ್ನಾಟಕ

# ಸರ್ವೆ ನಡೆಸಿ ವರದಿ ಸಲ್ಲಿಸಲು ಹೈಕೋರ್ಟ್ ಆದೇಶ

**ಬೆಂಗಳೂರು:** ನಗರದ ಕೆ.ಆರ್.ಪುರ ಹೋಬಳಿಯ ಬಸವನಪುರ ಕೆರೆ ಪ್ರದೇಶ ಒತ್ತುವರಿ ಆರೋಪ ಹಿನ್ನೆಲೆಯಲ್ಲಿ ಕೆರೆ ವಿಸ್ತೀರ್ಣ ಹಾಗೂ ಸಂರಕ್ಷಿತ ವಲಯದ ಸರ್ವೆ ನಡೆಸಿ ವರದಿ ಸಲ್ಲಿಸಲು ಹೈಕೋರ್ಟ್ ಗುರುವಾರ ಸರಕಾರಕ್ಕೆ ನಿರ್ದೇಶನ ನೀಡಿದೆ. ಬಸವನಪುರ ಗ್ರಾಮದ ಎ.ವೇಲು ಸಲ್ಲಿಸಿದ್ದ ಪಿಐಎಲ್, ಸಿಜೆ ಎ.ಎಸ್.ಓಕ್ ನೇತೃತ್ವದ ವಿಭಾಗೀಯ ಪೀಠದ ಮುಂದೆ ವಿಚಾರಣೆಗೆ ಬಂದಿತ್ತು.



ಅರ್ಜಿದಾರರ ವಾದ ಆಲಿಸಿದ ಬಳಿಕ ನ್ಯಾಯಪೀಠ, ಬೆಂಗಳೂರು ನಗರ ಜಿಲ್ಲಾಧಿಕಾರಿಯು ಕಂದಾಯ ಇಲಾಖೆಯ ಅಧಿಕಾರಿಯೊಬ್ಬರನ್ನು ನಿಯೋಜಿಸಿ, ಕೆರೆ ವಿಸ್ತೀರ್ಣ ಹಾಗೂ ಬಫರ್ ವಲಯದ ಸರ್ವೆ ನಡೆಸಬೇಕು. ಒಂದು ವೇಳೆ ಒತ್ತುವರಿ ಆಗಿದ್ದರೆ ತಕ್ಷಣ ತೆರವಿಗೆ ಕ್ರಮ ಕೈಗೊಳ್ಳುವ ಕುರಿತು ವರದಿಯಲ್ಲಿ ಉಲ್ಲೇಖಿಸಬೇಕು ಎಂದು ಆದೇಶಿಸಿ ವಿಚಾರಣೆಯನ್ನು ಫೆ.24ಕ್ಕೆ ಮುಂದೂಡಿತು. ಅಲ್ಲದೆ, ಸರ್ವೆ ನಡೆಸುವ ಸಂದರ್ಭದಲ್ಲಿ ಅರ್ಜಿದಾರರಿಗೆ ನೋಟಿಸ್ ನೀಡಿ ಅವರ ಗಮನಕ್ಕೆ ತರಬೇಕು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ(ಕೆಎಸ್‌ಪಿಸಿಬಿ) ಸಹ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿ, ಕೆರೆಯ ಸುತ್ತಮುತ್ತ ಮಳೆ ನೀರು ಕಾಲುವೆ ಜಾಗ ಒತ್ತುವರಿಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಿ ವರದಿ ಸಲ್ಲಿಸಬೇಕು ಎಂದು ನ್ಯಾಯಪೀಠ ಹೇಳಿದೆ.

VK
ವಿಜಯ ಕರ್ನಾಟಕ

# 371 ಕೋವಿಡ್ ಪ್ರಕರಣಗಳು ಪತ್ತೆ

**ಬೆಂಗಳೂರು:** ನಗರದಲ್ಲಿ ಗುರುವಾರ ಹೊಸದಾಗಿ 371 ಕೋವಿಡ್ ಸೋಂಕು ಪ್ರಕರಣಗಳು ಕಂಡು ಬಂದಿದ್ದು, ಸೋಂಕಿನಿಂದ ಒಬ್ಬರು ಮೃತಪಟ್ಟಿದ್ದಾರೆ. ಸೋಂಕಿನಿಂದ ಮುಕ್ತರಾಗಿ ನಗರದ ನಾನಾ ಆಸ್ಪತ್ರೆಗಳಿಂದ 509 ಮಂದಿ ಬಿಡುಗಡೆಯಾಗಿದ್ದು, ಇದುವರೆಗೆ ಆಸ್ಪತ್ರೆಗಳಿಂದ ಬಿಡುಗಡೆಯಾದವರ ಸಂಖ್ಯೆ 3,86,769ಕ್ಕೇರಿದೆ.

ಸಂಯುಕ್ತ ಕರ್ನಾಟಕ
ಕನ್ನಡಿಗರ ಧ್ವನಿ

# ಲಸಿಕೆ ಪಡೆಯಲಿದ್ದಾರೆ ಪ್ರಧಾನಿ ಮೋದಿ!

**ನವದೆಹಲಿ:** ದೇಶಾದ್ಯಂತ ಮೊದಲ ಹಂತದ ಕರೊನಾ ಲಸಿಕೆ ಅಭಿಯಾನ ಚಾಲ್ತಿಯಲ್ಲಿದ್ದು, ಎರಡನೇ ಹಂತದಲ್ಲಿ ಪ್ರಧಾನಿ ನರೇಂದ್ರ ಮೋದಿ, ಎಲ್ಲ ರಾಜ್ಯಗಳ ಸಿಎಂಗಳು ಲಸಿಕೆ ಪಡೆಯುವ ಸಾಧ್ಯತೆ ಇದೆ. ಮೊದಲ ಹಂತದಲ್ಲಿ ದೇಶಾದ್ಯಂತ ಮೂರು ಕೋಟಿ ಕರೊನಾ ವಾರಿಯರ್ಸ್‌ಗೆ ಲಸಿಕೆಗಳನ್ನು ಉಚಿತವಾಗಿ ನೀಡಲಾಗುತ್ತದೆ. ಎರಡನೇ ಹಂತದಲ್ಲಿ 50 ವರ್ಷಕ್ಕಿಂತ ಹೆಚ್ಚಿನ ವಯೋಮಾನದ ಎಲ್ಲರಿಗೂ ಲಸಿಕೆ ಉಚಿತವಾಗಿ ನೀಡಲಾಗುತ್ತದೆ. ಈ ವೇಳೆ ಪ್ರಧಾನಿ, ಸಿಎಂಗಳು, ಕೇಂದ್ರದ ಸಚಿವರು ಲಸಿಕೆ ಪಡೆಯಲಿದ್ದಾರೆ.

ಸಂಯುಕ್ತ ಕರ್ನಾಟಕ

# ಶಾಲೆಯಾಗಿ ಪರಿವರ್ತನೆಗೊಂಡ ಬಿಎಂಟಿಸಿ ಬಸ್



**ಬೆಂಗಳೂರು:** ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ಕರೆತರುವ ಉದ್ದೇಶದಿಂದ ಬಿಬಿಎಂಪಿಯ ರೂಪಿಸಿರುವ 'ಮನೆ ಬಾಗಿಲಿಗೆ ಶಾಲೆ' ಯೋಜನೆಗಾಗಿ ಬಿಎಂಟಿಸಿಯ 10 ಹಳೆಯ ಬಸ್‌ಗಳನ್ನು ಮೊಬೈಲ್ ಶಾಲೆಗಳಾಗಿ ಪರಿವರ್ತಿಸಲಾಗಿದೆ.

ಬಿಬಿಎಂಪಿಯು ತಲಾ 4 ಲಕ್ಷ ರೂ. ವೆಚ್ಚದಲ್ಲಿ ಬಿಎಂಟಿಸಿಯಿಂದ 10 ಬಸ್‌ಗಳನ್ನು ಖರೀದಿಸಿದೆ. ಬಿಎಂಟಿಸಿ ಕಾರ್ಯಾಗಾರದಲ್ಲಿ ಈ ಬಸ್‌ಗಳನ್ನು ಮೊಬೈಲ್ ಶಾಲೆಗಳಾಗಿ ಪರಿವರ್ತಿಸಲಾಗಿದೆ. ಪ್ರಯಾಣಿಕರ ಆಸನಗಳನ್ನು ತೆಗೆದು ಮಕ್ಕಳು ಕೂರಲು ಅನುಕೂಲವಾಗುವಂತೆ ವಿನ್ಯೆಲ್ ಫ್ಲೋರಿಂಗ್ ಅಳವಡಿಸಲಾಗಿದೆ. ಚಾಲಕನ ಹಿಂಬದಿಗೆ ಬೋರ್ಡ್ ಅಳವಡಿಸಲಾಗಿದೆ. ಶಿಕ್ಷಕರು ಹಾಗೂ ಸಿಬ್ಬಂದಿ ಕುಳಿತುಕೊಳ್ಳಲು ಆಸನ ವ್ಯವಸ್ಥೆ ಕಲ್ಪಿಸಲಾಗಿದೆ. ಬಸ್‌ಗೆ ಹಳದಿ ಬಣ್ಣ ಹಚ್ಚಿ ಶಾಲಾ ಬಸ್‌ನ ರೂಪ ನೀಡಲಾಗಿದೆ.

ಪಾಲಿಕೆಯ ಶಿಕ್ಷಕರು ಈ ಮೊಬೈಲ್ ಬಸ್‌ಗಳಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳಿರುವ ಪ್ರದೇಶಗಳಿಗೆ ತೆರಳಿ ಪಾಠ ಮಾಡಲಿದ್ದಾರೆ. ಈ ವಾರದೊಳಗೆ ಬಸ್‌ಗಳನ್ನು ಬಿಬಿಎಂಪಿಗೆ ಹಸ್ತಾಂತರಿಸಲಾಗುತ್ತದೆ.

ಸಂಯುಕ್ತ ಕರ್ನಾಟಕ

# ಶಾಲೆ-ಕಾಲೇಜು ಸುಧಾರಣೆಗೆ ಮುಂದಾದ ಪಾಲಿಕೆ

» ಮುಖ್ಯ ಶಿಕ್ಷಕರು, ಪ್ರಾಚಾರ್ಯರಿಗೆ ತರಬೇತಿ

**ಬೆಂಗಳೂರು:** ಬಿಬಿಎಂಪಿ ಶಾಲೆ-ಕಾಲೇಜುಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಳ, ಶಾಲಾ ನಿರ್ವಹಣೆಯಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಪಾಲಿಕೆಯ ಎಲ್ಲ ಮುಖ್ಯ ಶಿಕ್ಷಕರು ಮತ್ತು ಪ್ರಾಚಾರ್ಯರಿಗೆ 'ಆಡಳಿತ ನಿರ್ವಹಣೆ ತರಬೇತಿ ಕಾರ್ಯಾಗಾರ' ಆಯೋಜಿಸಲಾಗುತ್ತಿದೆ. ರಾಜ್ಯ ಶಿಕ್ಷಣ ಇಲಾಖೆಯ ಶಿಕ್ಷಣ ಸುಧಾರಣೆಗಳ ಸಲಹೆಗಾರ ಪ್ರೊ. ಎಂ.ಆರ್. ದೊರೆಸ್ವಾಮಿ ನೇತೃತ್ವದಲ್ಲಿ 26ರ ನಂತರ ತರಬೇತಿ ಕಾರ್ಯಾಗಾರ ಆಯೋಜಿಸಲಾಗುತ್ತಿದೆ. ಆಡಳಿತ ನಿರ್ವಹಣೆ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಸಮನ್ವಯತೆ, ಶಾಲಾ ನಿರ್ವಹಣೆಯಲ್ಲಿ ಪಾಲಕರ ಸಹಭಾಗಿತ್ವ, ಶಾಲಾ ದಾಖಲಾತಿ ಮತ್ತು ಹಾಜರಾತಿ ಹೆಚ್ಚಳದ ಕುರಿತು ಮಾಹಿತಿ ನೀಡಲಾಗುತ್ತದೆ ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ಸಹಾಯಕ ಆಯುಕ್ತ ನಾಗೇಂದ್ರ ನಾಯ್ಕ ತಿಳಿಸಿದ್ದಾರೆ.

ಸಂಯುಕ್ತ ಕರ್ನಾಟಕ

# ಸಮೀಕ್ಷೆ ಸಹಭಾಗಿತ್ವಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು:** ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಮನೆ-ಮನೆ ಸಮೀಕ್ಷೆ ಪ್ರಾರಂಭಿಸಲಾಗಿದೆ. ಪಾಲ್ಗೊಳ್ಳಲು ಆಸಕ್ತಿಯಿರುವ ಸ್ವಯಂ ಸೇವಾ ಸಂಸ್ಥೆಗಳ ಸದಸ್ಯರು, ಮಹಿಳಾ ಸ್ವ-ಸಹಾಯ ಗುಂಪುಗಳು ಸಹಭಾಗಿತ್ವ ವಹಿಸಬಹುದು. ಪಾಲಿಕೆ ಕೇಂದ್ರ ಕಚೇರಿ ವಿದ್ಯಾಧಿಕಾರಿಗೆ (ಇ-ಮೇಲ್ -education@yahoo.in) 22ರೊಳಗೆ ವಿವರ ಸಲ್ಲಿಸಬೇಕು.

ಸಂಯುಕ್ತ ಕರ್ನಾಟಕ

# 5 ಸಾವಿರಕ್ಕಿಂತ ಕಡಿಮೆ ಪ್ರಕರಣ

**ಬೆಂಗಳೂರು:** ರಾಜಧಾನಿಯಲ್ಲಿ ಗುರುವಾರ 371 ಹೊಸ ಕೋವಿಡ್ ಸೋಂಕು ಪ್ರಕರಣ ಪತ್ತೆಯಾಗಿದ್ದು, 509 ಮಂದಿ ಗುಣಮುಖರಾಗಿದ್ದಾರೆ. ಈ ಮೂಲಕ ಒಟ್ಟು ಸೋಂಕಿತರ ಸಂಖ್ಯೆ 3,96,140ಕ್ಕೆ ಏರಿಕೆಯಾಗಿದ್ದು, 3,86,769 ಮಂದಿ ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಸಕ್ರಿಯ ಪ್ರಕರಣ ಸಂಖ್ಯೆ ಕಳೆದ 7 ತಿಂಗಳ ನಂತರ 4,997ಕ್ಕೆ ಇಳಿಕೆಯಾಗಿದೆ. ಈ ಪೈಕಿ 74 ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

» **ತೀವ್ರ ನಿಗಾ ಘಟಕದಲ್ಲಿ 74 ಮಂದಿಗೆ ಚಿಕಿತ್ಸೆ**

ಉದಯವಾಣಿ
ಜನಮನದ ಜೀವನಾಡಿ

**50 ವರ್ಷ ದಾಟಿದ ಇತರೆ ನೇತಾರರಿಗೆ 3ನೇ ಹಂತದಲ್ಲಿ ಲಸಿಕೆ** | **ಜನರಲ್ಲಿ ವಿಶ್ವಾಸ ಮೂಡಿಸಲಿದೆ ಈ ಕ್ರಮ**

# 2ನೇ ಹಂತದಲ್ಲಿ ಪ್ರಧಾನಿ, ಸಿಎಂಗಳಿಗೆ ಲಸಿಕೆ?

**ನವದೆಹಲಿ:** ಲಸಿಕೆ ಪಡೆಯುವವರ ಸಂಖ್ಯೆ ಇಳಿಮುಖವಾಗುತ್ತಿರುವ ನಡುವೆಯೇ, ಜನರಲ್ಲಿ ಭರವಸೆ ಮೂಡಿಸುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಲಸಿಕೆ ಪಡೆಯಲು ತಯಾರಿ ನಡೆಸಿದ್ದಾರೆ. ಮೂಲಗಳ ಪ್ರಕಾರ, 2ನೇ ಹಂತದಲ್ಲಿ ಪ್ರಧಾನಿ, ಮುಖ್ಯಮಂತ್ರಿಗಳಿಗೆ ಲಸಿಕೆ ನೀಡಲಾಗುತ್ತದೆ.




ಜ.16ರಿಂದ ದೇಶಾದ್ಯಂತ ಲಸಿಕೆ ಅಭಿಯಾನ ಆರಂಭವಾಗಿದ್ದು, ಆರೋಗ್ಯ ಕಾರ್ಯಕರ್ತರು ಲಸಿಕೆ ಸ್ವೀಕರಿಸಲು ಹಿಂದೇಟು ಹಾಕುತ್ತಿರುವ ಕಾರಣ, ಉದ್ದೇಶಿತ ಗುರಿ ಸಾಧಿಸಲು ಸಾಧ್ಯವಾಗಿಲ್ಲ. ಪರಿಸ್ಥಿತಿ ಹೀಗಿರುವಾಗ ಪ್ರಧಾನಿ, ಸಿಎಂಗಳು ಸೇರಿದಂತೆ ಜನಪ್ರತಿನಿಧಿಗಳು ಲಸಿಕೆ ಹಾಕಿಸಿಕೊಂಡರೆ, ಜನರಿಗೂ ವಿಶ್ವಾಸ ಮೂಡುತ್ತದೆ ಎಂದು ಅನೇಕರು ಅಭಿಪ್ರಾಯಪಟ್ಟಿದ್ದರು.

ಕಳೆದ ವರ್ಷದ ನ.24ರಂದು ಪ್ರಧಾನಿ ಮೋದಿ ಹಾಗೂ ಸಿಎಂಗಳ ನಡುವೆ ನಡೆದ ಸಂವಾದದ ವೇಳೆಯೇ ಲಸಿಕೆ ಸ್ವೀಕಾರ ಕುರಿತು ಚರ್ಚೆ ನಡೆದಿದೆ. ಆ ಸಂವಾದದಲ್ಲಿ ಮಾತನಾಡಿದ್ದ ಮೋದಿ, 'ನೀವ್ಯಾರೂ ಲಸಿಕೆ ಪಡೆಯಲು ಲಾಬಿ ಮಾಡಬಾರದು. 2ನೇ ಸುತ್ತಿನಲ್ಲಿ ನಿಮಗೆಲ್ಲರಿಗೂ ಅವಕಾಶ ಸಿಗುತ್ತದೆ' ಎಂದು ಹೇಳಿದ್ದರು. ಅದರಂತೆ, ಎರಡನೇ ಹಂತದಲ್ಲಿ ಪ್ರಧಾನಿ ಮೋದಿ, 50 ವರ್ಷ ದಾಟಿರುವ ಸಿಎಂಗಳು, ಸಂಸದರು ಹಾಗೂ ಶಾಸಕರು ವ್ಯಾಕ್ಸಿನ್ ಪಡೆಯುವ ಸಾಧ್ಯತೆಯಿದೆ. 50 ವರ್ಷ ದಾಟಿರುವ ಇತರೆ ರಾಜಕಾರಣಿಗಳಿಗೆ ಮೂರನೇ ಹಂತದಲ್ಲಿ ಲಸಿಕೆ ನೀಡಲು ನಿರ್ಧರಿಸಲಾಗಿದೆ ಎಂದು ಹೇಳಲಾಗಿದೆ.

ಮೊದಲ ಹಂತದಲ್ಲಿ ಆರೋಗ್ಯ ಸಿಬ್ಬಂದಿ, ಆರೋಗ್ಯ ಕಾರ್ಯಕರ್ತರು, ಪೊಲೀಸರು, ಸಶಸ್ತ್ರ ಪಡೆಗಳು, ನೈರ್ಮಲ್ಯ ಕಾರ್ಮಿಕರು ಲಸಿಕೆ ಸ್ವೀಕರಿಸಿದ್ದಾರೆ. ಎರಡನೇ ಹಂತದಲ್ಲಿ, 50 ವರ್ಷ ದಾಟಿದವರು ಮತ್ತು ವಿವಿಧ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಲಸಿಕೆ ನೀಡಲಾಗುತ್ತದೆ.

**ಲಸಿಕೆ ಪಡೆದ ಮೊದಲ 5 ಜಿಲ್ಲೆಗಳು**

| | |
|---|---|
| 27,318 ಬೆಂಗಳೂರು | 10,218 ಬೆಳಗಾವಿ |
| 10,080 ತುಮಕೂರು | 6,750 ಚಿತ್ರದುರ್ಗ |
| 6,511 ಮೈಸೂರು | |

## ಕರ್ನಾಟಕವೇ ಫಸ್ಟ್

ದೇಶದಲ್ಲೇ ಲಸಿಕೆ ಪಡೆಯುತ್ತಿರುವ ಆರೋಗ್ಯ ಕಾರ್ಯಕರ್ತರ ಸಂಖ್ಯಾವಾರು ಲೆಕ್ಕಾಚಾರದಲ್ಲಿ ರಾಜ್ಯವೇ ಮುಂದಿದೆ. ಇದುವರೆಗೆ ರಾಜ್ಯದಲ್ಲಿ ಲಕ್ಷಕ್ಕೂ ಹೆಚ್ಚು ಮಂದಿ ಲಸಿಕೆ ಪಡೆದಿದ್ದಾರೆ. ಕಳೆದ ಆರು ದಿನಗಳಲ್ಲಿ ಲಸಿಕೆಗೆ ನಿಗದಿಪಡಿಸಿದ್ದವರಲ್ಲಿ ಶೇ.57ರಷ್ಟು ಆರೋಗ್ಯ ಸಿಬ್ಬಂದಿ ಪಡೆದಿದ್ದಾರೆ. ಜ.16ರಿಂದ 21ರ ವರೆಗೂ ಒಟ್ಟು 2,36,812 ಮಂದಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿತ್ತು. ಈ ಪೈಕಿ 1,34,597 ಮಂದಿ ಲಸಿಕೆ ಪಡೆದಿದ್ದಾರೆ.

ನಾನು ಕೂಡ ಗುರುವಾರ ಲಸಿಕೆ ಪಡೆದಿದ್ದೇನೆ. ಲಸಿಕೆ ಸ್ವೀಕರಿಸುವುದು ನಾಗರಿಕರ ಹೊಣೆಗಾರಿಕೆಯಾಗಿದೆ. ಯಾವುದೇ ಲಸಿಕೆ ಪಡೆದಾಗಲೂ ಸಣ್ಣ ಜ್ವರ, ಮೈಕೈನೋವು ಕಾಣಿಸಿಕೊಳ್ಳುತ್ತವೆ. ಇವುಗಳು ಕೊರೊನಾ ಲಸಿಕೆಯ ಅಡ್ಡಪರಿಣಾಮಗಳಲ್ಲ, ಆರೋಗ್ಯ ಸಿಬ್ಬಂದಿ ಭಯಬಿಟ್ಟು ಸ್ವಯಂಪ್ರೇರಿತವಾಗಿ ಮುಂದೆ ಬಂದು ಲಸಿಕೆ ಪಡೆಯಬೇಕು.

• **ಡಾ. ಸಿ. ಎನ್.ಮಂಜುನಾಥ್,**
ನಿರ್ದೇಶಕರು, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

ಉದಯವಾಣಿ
ಜನಮನದ ಜೀವನಾಡಿ

# ಸರ್ವ ಸೇವೆಗೆ 'ಏಕೀಕೃತ ಜನ ಸಂಪರ್ಕ' ಆ್ಯಪ್

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ಸಾರ್ವಜನಿಕರ ಕುಂದು- ಕೊರತೆ ಹಾಗೂ ವಿವಿಧ ಸೌಲಭ್ಯಗಳನ್ನು ಒಂದೇ ವೇದಿಕೆಯಲ್ಲಿ ನೀಡುವ ನಿಟ್ಟಿನಲ್ಲಿ ಪಾಲಿಕೆಯ ಐಟಿ ವಿಭಾಗವು 'ಯೂನಿಫೈಡ್ ಡಿಜಿಟಲ್ ಫ್ಲಾಟ್ ಫಾರ್ಮ್' (ಒಂದೇ ಸೂರಿನಡಿ ಎಲ್ಲ ಸೌಲಭ್ಯ)ಎಂಬ ಆ್ಯಪ್ ಅಭಿವೃದ್ಧಿ ಪಡಿಸುತ್ತಿದೆ.

ಸರ್ಕಾರದ ಮಿಷನ್ 2022ರ ಭಾಗವಾಗಿ 'ಏಕೀಕೃತ ಜನ ಸಂಪರ್ಕ ವೇದಿಕೆ' ಆ್ಯಪ್ ಸಿದ್ಧತೆ ಪಡಿಸುವುದಕ್ಕೆ ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳು ಪಾಲಿಕೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದು, ಈ ಕಾರ್ಯ ವೇಗ ಪಡೆದುಕೊಂಡಿದೆ.

ನಗರದಲ್ಲಿ ಯಾವುದಾದರು ನಿರ್ದಿಷ್ಟ ಸಮಸ್ಯೆಗೆ ಸಂಬಂಧಿಸಿದಂತೆ ದೂರು ನೀಡಲು ಸಹಾಯ 2.0 ಆ್ಯಪ್ ಇದೆ. ಇದರಲ್ಲಿ ದೂರು ಮಾತ್ರ ನೀಡಬಹುದು. ಆದರೆ, ಪಾಲಿಕೆಯ ವಿವಿಧ ಸೇವೆಗಳನ್ನು ಬಳಸಬೇಕಾದರೆ ಪ್ರತ್ಯೇಕವಾಗಿ ಲಾಗಿನ್ ಆಗಬೇಕು ಅಥವಾ ಮಾಹಿತಿ ಹಾಗೂ ವಿವರ ಬೇಕಾದರೆ ಪಾಲಿಕೆಯ ಅಧಿಕೃತ ವೆಬ್ ಸೈಟ್‌ಗೆ ಭೇಟಿ ನೀಡಬೇಕು.

ಹೀಗಾಗಿ, ಎಲ್ಲ ವಿಭಾಗದ ದೂರು ಹಾಗೂ ಸೇವೆಗೆ 'ಏಕೀಕೃತ ಜನ ಸಂಪರ್ಕ ವೇದಿಕೆ' ಆ್ಯಪ್ ಸಿದ್ಧಪಡಿಸಲಾಗುತ್ತಿದೆ. ಸಾರ್ವಜನಿಕರಿಗೆ ಹೊಸ ಆ್ಯಪ್‌ನ ಮೂಲಕ ನೆಟ್‌ಬ್ಯಾಂಕಿಂಗ್ ಮಾದರಿಯಲ್ಲಿ ಹೆಸರು ಹಾಗೂ ಪಾಸ್ ವರ್ಡ್ ಸಿಗಲಿದೆ. ಇದರಿಂದ ಎಲ್ಲ ರೀತಿಯ ಮಾಹಿತಿ ಸಿಗಲಿದೆ. ಅದರ ಪ್ರಗತಿ ವಿವರವೂ ಕಾಣಿಸಲಿದೆ.

> ಸಾರ್ವಜನಿಕರಿಗೆ ಅತ್ಯಂತ ಸರಳವಾಗಿ ಹಾಗೂ ಒಂದೇ ಸೂರಿನಡಿ ಎಲ್ಲ ಸೇವೆ ನೀಡುವ ನಿಟ್ಟಿನಲ್ಲಿ ವಿನೂತನ ಆ್ಯಪ್ ಅಭಿವೃದ್ಧಿಪಡಿಸಲಾಗುತ್ತಿದೆ.
>
> • ರಾಜೇಂದ್ರ ಚೋಳನ್,
> ಬಿಬಿಎಂಪಿ ವಿಶೇಷ ಆಯುಕ್ತ
> (ಮಾಹಿತಿ ತಂತ್ರಜ್ಞಾನ)

ಉದಯವಾಣಿ
ಜನಮನದ ಜೀವನಾಡಿ

# 5,410 ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ

**ಬೆಂಗಳೂರು:** ನಗರದಲ್ಲಿ ಗುರುವಾರ 23 ಸರ್ಕಾರಿ ಹಾಗೂ ಪಾಲಿಕೆಯ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ 92 ಖಾಸಗಿ ಆಸ್ಪತ್ರೆಗಳಲ್ಲಿ ಒಟ್ಟು 5,410 ಜನ ಆರೋಗ್ಯ ಕಾರ್ಯ ಕರ್ತರು ಕೋವಿಡ್ ಲಸಿಕೆ ತೆಗೆದುಕೊಂಡಿದ್ದಾರೆ. ಇಷ್ಟಾದರೂ ಉದ್ದೇಶಿತ ಲಸಿಕೆ ನೀಡುವ ಗುರಿ ಮುಟ್ಟಲು ಸಾಧ್ಯವಾಗಿಲ್ಲ. ಗುರುವಾರ ಒಟ್ಟು 10,469 ಜನರಿಗೆ ಲಸಿಕೆ ನೀಡಲು ಉದ್ದೇಶಿಸಲಾಗಿತ್ತು. ಆದರೆ, ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಗುರುವಾರವೂ ಕೆಲವರು ಹಿಂದೇಟು ಹಾಕಿದ್ದಾರೆ. ಕೋವಿನ್ ಪೋರ್ಟ್‌ಲ್‌ನಲ್ಲಿ ಕೋವಿಡ್ ಲಸಿಕೆಗೆ ಹೆಸರು ದಾಖಲಿಸಿಕೊಂಡಿದ್ದ 10,469 ಆರೋಗ್ಯ ಕಾರ್ಯಕರ್ತರಲ್ಲಿ ಸರ್ಕಾರಿ ಹಾಗೂ ಪಾಲಿಕೆಯ 2,328 ಆರೋಗ್ಯ ಕಾರ್ಯಕರ್ತರು ಹಾಗೂ ಖಾಸಗಿ ಆಸ್ಪತ್ರೆಯ 8,141 ಜನ ಇದ್ದರು. ಇವರಲ್ಲಿ ಕ್ರಮವಾಗಿ 1027 ಹಾಗೂ 4,282 ಜನ ಲಸಿಕೆ ಹಾಕಿಸಿಕೊಂಡಿದ್ದು, ಶೇ.52ರಷ್ಟು ಗುರಿ ಸಾಧಿಸಿದಂತಾಗಿದೆ.



**23 ಮಂದಿಗೆ ಅಡ್ಡ ಪರಿಣಾಮ:** ನಗರದಲ್ಲಿ ಗುರುವಾರ ಕೋವಿಡ್ ಲಸಿಕೆ ಹಾಕಿಸಿಕೊಂಡವರಲ್ಲಿ 23 ಜನರಿಗೆ ಅಡ್ಡ ಪರಿಣಾಮ ಕಾಣಿಸಿಕೊಂಡಿದೆ. ಈ ಸಂಬಂಧ ಪ್ರತಿಕ್ರಿಯಿಸಿದ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ಅವರು, ಲಸಿಕೆ ಹಾಕಿಸಿಕೊಂಡ ಕೆಲವರಲ್ಲಿ ಜ್ವರ ಹಾಗೂ ಮೈಕೈ ನೋವು ಲಕ್ಷಣಗಳು ಕಾಣಿಸಿಕೊಂಡಿವೆ. ಉಳಿದಂತೆ ಯಾರಿಗೂ ಹೆಚ್ಚಿನ ತೊಂದರೆ ಆಗಿಲ್ಲ, ಎಲ್ಲರೂ ಕ್ಷೇಮವಾಗಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

ಉದಯವಾಣಿ
ಜನಮನದ ಜೀವನಾಡಿ

# ಲಸಿಕೆ ಪಡೆಯಲು ಹಿಂದೇಟು!

**ಬೆಂಗಳೂರು:** ರಾಜ್ಯದಲ್ಲಿ ಕೊರೊನಾ ಲಸಿಕೆಗೆ ಪಡೆಯಲು ಆಹ್ವಾನಿಸಿದ ಇಬ್ಬರು ಆರೋಗ್ಯ ಸಿಬ್ಬಂದಿ ಪೈಕಿ ಒಬ್ಬರು ಮಾತ್ರ ಲಸಿಕೆ ಪಡೆಯುತ್ತಿದ್ದಾರೆ! ಈ ಮೂಲಕ ಲಸಿಕೆ ಪಡೆಯಲು ನೋಂದಣಿಯಾದ ಅರ್ಧದಷ್ಟು ಸಿಬ್ಬಂದಿ ನಾನಾ ಕಾರಣಗಳಿಗೆ ಲಸಿಕೆ ಅಭಿಯಾನದಿಂದ ದೂರ ಉಳಿಯುತ್ತಿದ್ದಾರೆ. ಕಳೆದ ಆರು ದಿನಗಳಲ್ಲಿ ಲಸಿಕೆಗೆ ನಿಗದಿಪಡಿಸಿದ್ದವರಲ್ಲಿ ಶೇ.57ರಷ್ಟು ಆರೋಗ್ಯ ಸಿಬ್ಬಂದಿಗೆ ಮಾತ್ರ ಲಸಿಕೆ ನೀಡಲಾಗಿದೆ. ಜ.16 ರಿಂದ 21ರ ವರೆಗೂ ಒಟ್ಟು 2,36,812 ಮಂದಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿತ್ತು. ಈ ಪೈಕಿ 1,34,597 ಮಂದಿ ಮಾತ್ರ ಲಸಿಕೆ ಪಡೆದಿದ್ದಾರೆ.



**ಅತಿ ಕಡಿಮೆ ಲಸಿಕೆ ಪಡೆದ ಕೊನೆಯ 5 ಜಿಲ್ಲೆಗಳು**

| | |
|---|---|
| ಗದಗ | 2,178 |
| ಯಾದಗಿರಿ | 953 |
| ಬೀದರ್ | 1,893 |
| ಚಾಮರಾಜನಗರ | 1,117 |
| ಹಾಸನ | 2,314 |

## ಲಸಿಕೆ ಪಡೆಯದಿರಲು ಪ್ರಮುಖ ಕಾರಣ

ಲಸಿಕೆಗೆಂದು ನೋಂದಣಿಯಾದವರಲ್ಲಿ ನಿತ್ಯ ಇಂತಿಷ್ಟು ಆರೋಗ್ಯ ಸಿಬ್ಬಂದಿಯನ್ನು ಆಯ್ಕೆ ಮಾಡಿಕೊಂಡು ಲಸಿಕೆ ಕೇಂದ್ರಕ್ಕೆ ಆಹ್ವಾನಿಸಲಾಗುತ್ತದೆ. ಈ ಪೈಕಿ ಶೇ.55 ಸಿಬ್ಬಂದಿ ಮಾತ್ರ ಆಗಮಿಸುತ್ತಿದ್ದು, ಇನ್ನುಳಿದವರು ಗೈರಾಗುತ್ತಿದ್ದಾರೆ.

- ಕೆಲ ಸಿಬ್ಬಂದಿ ಕಾದುನೋಡುವ ತಂತ್ರ ಅನುಸರಿಸುತ್ತಿದ್ದಾರೆ.
- ಕೆಲವರಿಗೆ ಲಸಿಕೆ ಹಿಂದಿನ ದಿನ/ಆ ದಿನ ಜ್ವರ/ಅನಾರೋಗ್ಯ ಕಾರಣ.
- ತಾಂತ್ರಿಕ ಸಮಸ್ಯೆ:ಮೊಬೈಲ್ ಸಂದೇಶ ತಲುಪುತ್ತಿಲ್ಲ, ಸಂವಹನ ಕೊರತೆ.
- ಕೆಲ ಸಿಬ್ಬಂದಿ ರಜೆಯಲ್ಲಿದ್ದಾರೆ ಅಥವಾ ಊರಲ್ಲಿರುವುದಿಲ್ಲ
- ಕೆಲವರು ಲಸಿಕೆ ನಿರಾಕರಿಸುತ್ತಿದ್ದಾರೆ.

## ಲಸಿಕಾ ಪ್ರಕ್ರಿಯೆ ಶೇಕಡಾವಾರು ಆಧರಿಸಿ

- **ಲಸಿಕೆ ಪಡೆಯಲು ಉತ್ತಮ ಪ್ರತಿಕ್ರಿಯೆ ಇರುವ ಜಿಲ್ಲೆಗಳು :** ತುಮಕೂರು, ಚಿಕ್ಕಮಗಳೂರು, ಕೊಡಗು, ಮಂಡ್ಯ, ಬೆಳಗಾವಿ, ಬಳ್ಳಾರಿ.
- **ನಿರಾಶಾದಾಯಕ ಪ್ರತಿಕ್ರಿಯೆ ಇರುವ ಜಿಲ್ಲೆಗಳು :** ಯಾದಗಿರಿ, ಕಲಬುರಗಿ, ಹಾವೇರಿ, ಉತ್ತರ ಕನ್ನಡ, ಬೆಂಗಳೂರು ಗ್ರಾಮಾಂತರ.

## ದಿನಾಂಕವಾರು ಲಸಿಕೆ ವಿತರಣೆ ಅಂಕಿ-ಅಂಶ

(21/1/2021 ರವರೆಗಿನ ಅಂಕಿಅಂಶ)

| ದಿನ | ನಿಗದಿತರು | ಪಡೆದವರು | ಸಾಧನೆ |
|---|---|---|---|
| ಮೊದಲ ದಿನ | 21,426 | 13,609 | 63% |
| 2ನೇ ದಿನ | 6,327 | 3,721 | 59% |
| 3 ನೇ ದಿನ | 81,219 | 50,219 | 62% |
| 4 ನೇ ದಿನ | 32,205 | 15,235 | 47% |
| 5 ನೇ ದಿನ | 62,772 | 34,583 | 55% |
| 6 ನೇ ದಿನ | 32,773 | 17,190 | 45% |
| ಒಟ್ಟು | 2,36,812 | 1,34,597 | 57% |

ಉದಯವಾಣಿ
ಜನಮನದ ಜೀವನಾಡಿ

# ಲಸಿಕೆ ಪಡೆಯಲು ಬೇಡ ಹಿಂಜರಿಕೆ!




ಭಾರತದಲ್ಲಿ ವ್ಯಾಪಕ ಲಸಿಕೆ ಪ್ರಕ್ರಿಯೆ ಆರಂಭವಾಗಿದೆ. ಇದರ ಬೆನ್ನಲ್ಲೇ ಲಸಿಕೆಯ ಬಗ್ಗೆ ಅನುಮಾನಗಳೂ ಹುಟ್ಟಿಕೊಂಡಿವೆ. ಅದರಲ್ಲೂ ರಾಜ್ಯದಲ್ಲಿ ಲಸಿಕೆ ಪಡೆದ ಇಬ್ಬರು ಮೃತರಾದ ಘಟನೆ ವರದಿಯಾಗಿರುವುದು ಆತಂಕ ಹೆಚ್ಚಿಸಿದೆ. ಆದರೆ ಇದಕ್ಕೆ ಯಾವುದೇ ಪುರಾವೆಗಳಿಲ್ಲ. ಯಾವುದೇ ಲಸಿಕೆಯಾದರೂ, ಅದನ್ನು ಪಡೆದಾಗ ಕೆಲವರಲ್ಲಿ ಸಣ್ಣ ಮಟ್ಟದ ಅಡ್ಡಪರಿಣಾಮಗಳು ಕಾಣಿಸಿಕೊಳ್ಳುವುದು ಸಹಜ. ಹೀಗಾಗಿ, ಭಯಪಡಬೇಡಿ ಎಂದು ಪರಿಣತರು ಹೇಳುತ್ತಿದ್ದಾರೆ.

## ಕೋವಿಡ್ 19 ಲಸಿಕೆಗಳು ಎಷ್ಟು ಸುರಕ್ಷಿತ?

ಅಮೆರಿಕವೊಂದರಲ್ಲೇ ಇದುವರೆಗೂ 1.3 ಕೋಟಿ ಜನರಿಗೆ ಲಸಿಕೆ ನೀಡಲಾಗಿದ್ದರೆ, ಭಾರತದಲ್ಲಿ ಈ ಸಂಖ್ಯೆ 4 ಲಕ್ಷ ಸಮೀಪಿಸುತ್ತಿದೆ. ಜಾಗತಿಕವಾಗಿ ಇದುವರೆಗೂ 4 ಕೋಟಿ ಜನರು ಲಸಿಕೆಯನ್ನು ಪಡೆದಿದ್ದಾರೆ. ಬಹುತೇಕ ದೇಶಗಳಲ್ಲೂ ಲಸಿಕೆ ಪಡೆದವರಲ್ಲಿ ಕೆಲವರಿಗೆ ತಲೆನೋವು, ಮಂದ ಜ್ವರ, ಇಂಜೆಕ್ಷನ್ ನೀಡಿದ ಜಾಗದಲ್ಲಿ ಚರ್ಮ ಕೆಂಪಾದಂಥ ಲಕ್ಷಣಗಳು ಕಾಣಿಸಿಕೊಂಡಿರುವುದನ್ನು ಬಿಟ್ಟರೆ ಗಂಭೀರ ಪರಿಣಾಮಗಳೇನೂ ಆಗಿಲ್ಲ. ಭಾರತದ ವಿಚಾರಕ್ಕೇ ಬರುವುದಾದರೆ, ಮಂಗಳವಾರದ ವೇಳೆಗೆ ಲಸಿಕೆ ಪಡೆದ 3.8 ಲಕ್ಷ ಮಂದಿಯಲ್ಲಿ ಕೇವಲ 580 ಮಂದಿಯಲ್ಲಿ ಮಾತ್ರ ಪ್ರತಿಕೂಲ ಪರಿಣಾಮಗಳು ಕಾಣಿಸಿಕೊಂಡಿವೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಅವೂ ಸಹ, ಜ್ವರ, ತಲೆನೋವಿನಂಥ ಸಮಸ್ಯೆಗಳೇ ಹೊರತು, ಗಂಭೀರ ಪರಿಣಾಮಗಳಲ್ಲ.

## ಎಲ್ಲಾ ಲಸಿಕೆಗಳಲ್ಲೂ ಸಹಜ

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಇಂದು ವಿವಿಧ ರೋಗಗಳಿಗೆ ಬಳಕೆಯಾಗುತ್ತಿರುವ ಲಸಿಕೆಗಳೆಲ್ಲವೂ ಚಿಕ್ಕಪುಟ್ಟ ಪ್ರಮಾಣದ ಅಡ್ಡಪರಿಣಾಮ ಉಂಟುಮಾಡುತ್ತವೆ. ದಡಾರ, ಮಂಪ್ಸ್(ಗದ್ದಬಾವು), ರುಬೆಲ್ಲ(ಮೈಮೇಲೆ ಕೆಂಪು ದದ್ದುಗಳೇಳುವ ಸೋಂಕು ರೋಗ)ಗಾಗಿ ನೀಡುವ ಎಂಎಂಆರ್ ಲಸಿಕೆ ಪ್ರಕ್ರಿಯೆಯ ವೇಳೆಯಲ್ಲೂ 10 ಪ್ರತಿಶತ ಜನರಿಗೆ ನೋವು, ಇಂಜೆಕ್ಷನ್ ಕೊಟ್ಟ ಜಾಗದಲ್ಲಿ ಊತ ಕಾಣಿಸಿಕೊಳ್ಳಬಹುದು, ಇನ್ನು 5-15 ಪ್ರತಿಶತ ಜನರಲ್ಲಿ ಜ್ವರ ಕಾಣಿಸಿಕೊಳ್ಳುತ್ತದೆ. ಪೋಲೀಯೋ ಲಸಿಕೆಯ ವಿಚಾರಕ್ಕೆ ಬಂದರೆ, ಕೇವಲ 1 ಪ್ರತಿಶತ ಮಕ್ಕಳಿಗೆ ಮಾತ್ರ ಜ್ವರ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಹೀಗಾಗಿ, ಕೋವಿಡ್-19 ಲಸಿಕೆ ಪಡೆದಾಗಲೂ ಇಂಥ ಲಕ್ಷಣಗಳು ಕಾಣಿಸಿಕೊಂಡರೆ ಆತಂಕ ಪಡುವ ಅಗತ್ಯವಿಲ್ಲ ಎಂದೇ ಪರಿಣತರು ಹೇಳುತ್ತಾರೆ. ಜಗತ್ತಿನಾದ್ಯಂತ ಸಾಮಾನ್ಯವಾಗಿ ನೀಡಲಾಗುವ ಲಸಿಕೆಗಳಲ್ಲಿ, ಕೆಲವರಲ್ಲಿ ಗಂಭೀರ ಪರಿಣಾಮಗಳು ಕಾಣಿಸಿಕೊಳ್ಳುತ್ತವಾದರೂ, ಅವು ಅಪರೂಪದಲ್ಲಿ ಅಪರೂಪ.

ಭಾರತ ಸೇರಿದಂತೆ ವ್ಯಾಪಕ ಲಸಿಕೆ ಪ್ರಕ್ರಿಯೆ ಆರಂಭಿಸಿರುವ ದೇಶಗಳಲ್ಲೆಲ್ಲ, ಲಸಿಕೆ ಪಡೆದ ಕೆಲವರಲ್ಲಿ ಅಲ್ಪಮಟ್ಟದ ಅಡ್ಡ ಪರಿಣಾಮ ಕಾಣಿಸಿಕೊಳ್ಳುತ್ತಿವೆ. ಆದರೆ, ಈ ರೀತಿಯ ಪರಿಣಾಮಗಳು ಕಾಣಿಸಿಕೊಳ್ಳುತ್ತವೆ ಎಂದರೆ, ಲಸಿಕೆ ನಿರೀಕ್ಷಿತ ಪರಿಣಾಮ ಉಂಟುಮಾಡುತ್ತಿದೆ ಎಂದೇ ಅರ್ಥ ಎನ್ನುತ್ತಾರೆ ಪರಿಣತರು.

## ಕೋವಿಡ್ -19 ಲಸಿಕೆ ಪಡೆದ ತಜ್ಞರ ಅಭಿಪ್ರಾಯ ಏನಿದೆ?



ಲಸಿಕೆ ತಯಾರು ಮಾಡಿದ ವಿಧಾನ ಅತ್ಯಂತ ವೈಜ್ಞಾನಿಕವಾಗಿದೆ. ಸೋಂಕಿನ ವಿರುದ್ಧ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸುತ್ತದೆ ಎಂದು ಸಾಬೀತಾಗಿದೆ. ಲಸಿಕೆ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲದವರು ಅಪಪ್ರಚಾರ ಮಾಡುತ್ತಿದ್ದಾರೆ. ಅವಕಾಶ ಸಿಕ್ಕಾಗ ಎಲ್ಲರೂ ಲಸಿಕೆ ತೆಗೆದುಕೊಳ್ಳಿ, ನಿರ್ಲಕ್ಷ್ಯದಿಂದ ದೊಡ್ಡ ಅನಾಹುತಕ್ಕೆ ದಾರಿ ಮಾಡಿಕೊಡಬೇಡಿ.

• ಡಾ.ವಿ.ರವಿ, ವೈರಾಣು ತಜ್ಞ, ಕೊರೊನಾ ನಿಯಂತ್ರಣ ತಾಂತ್ರಿಕ ಸಲಹಾ ಸಮಿತಿ ಸದಸ್ಯ.



ಮಣಿಪಾಲ್ ಆಸ್ಪತ್ರೆಯಲ್ಲಿ ವೈದ್ಯರು ಸೇರಿದಂತೆ ಐದು ಸಾವಿರಕ್ಕೂ ಹೆಚ್ಚು ಆರೋಗ್ಯ ಸಿಬ್ಬಂದಿ ಲಸಿಕೆ ಪಡೆದಿದ್ದಾರೆ. ಎಲ್ಲರೂ ಆರೋಗ್ಯವಾಗಿದ್ದಾರೆ. ವದಂತಿಗಳಿಗೆ ಕಿವಿಗೊಡದೇ ಅವಕಾಶ ಬಂದಾಗ ಲಸಿಕೆ ಪಡೆಯಿರಿ.

• ಡಾ.ಸುದರ್ಶನ್ ಬಲ್ಲಾಳ್, ಮಣಿಪಾಲ್ ಆಸ್ಪತ್ರೆಗಳ ಅಧ್ಯಕ್ಷರು



ಯಾವುದೇ ಸಾಂಕ್ರಾಮಿಕಕ್ಕೆ ಲಸಿಕೆ ಕೊಟ್ಟಾಗಲೂ ಮೈಕೈ ನೋವು, ತಲೆ ಸುತ್ತು, ಲಸಿಕೆ ಪಡೆದ ಜಾಗದಲ್ಲಿ ಕೆಂಪಾಗುವುದು ಸಾಮಾನ್ಯ. ಅಡ್ಡಪರಿಣಾಮ ಶೇ. 5 ರಷ್ಟು ಆಗಬಹುದು. ಆದರೆ, ಭವಿಷ್ಯದಲ್ಲಿ ಅನುಕೂಲ ಹೆಚ್ಚು. ಅನವಶ್ಯಕವಾಗಿ ಅಪಪ್ರಚಾರ ಬೇಡ.

• ಡಾ.ಎಂ.ಕೆ.ಸುದರ್ಶನ್, ಕೊರೊನಾ ನಿಯಂತ್ರಣ ತಾಂತ್ರಿಕ ಸಲಹಾ ಸಮಿತಿ



ಅನೇಕ ದೇಶಗಳು ಕೊರೊನಾ 2ನೇ ಅಲೆ ಪರಿಣಾಮ ಎದುರಿಸುತ್ತಿವೆ. ಹೀಗಾಗಿ ಅಲ್ಲಿನ ಜನರಲ್ಲಿ ಲಸಿಕೆ ಕುರಿತು ಹೆಚ್ಚು ಕಾಳಜಿ ಇದೆ. ನಮ್ಮಲ್ಲಿ 2ನೇ ಅಲೆ ಒಂದಿಷ್ಟು ತಡವಾಗಿದ್ದು, ಆರಂಭವಾಗುವ ಮುಂಚೆ ಎಲ್ಲ ಲಸಿಕೆ ಪಡೆದರೆ ಅನಾಹುತ ತಪ್ಪಿಸಬಹುದು.

• ಡಾ.ದೇವಿಶೆಟ್ಟಿ, ಹೃದ್ರೋಗ ತಜ್ಞ ನಾರಾಯಣ ಹೆಲ್ತ್ ಸಿಟಿ

### ವಿವಿಧ ಲಸಿಕೆಗಳ ಸಣ್ಣ ಪರಿಣಾಮಗಳು

| ಲಸಿಕೆ | ಸೂಜಿ ಚುಚ್ಚಿದ ಜಾಗ (ಊತ, ಚರ್ಮ ಕೆಂಪು) | ಜ್ವರ | ಅಸ್ವಸ್ಥತೆ |
|---|---|---|---|
| ಬಿಸಿಜಿ | 90%-95% ಜನರಿಗೆ | ಇಲ್ಲ | ಇಲ್ಲ |
| ಎಂಎಂಆರ್ | 5% ಜನರಿಗೆ | 5%-15% | 5% |
| ಪೋಲೀಯೋ ಹನಿ | ಇಲ್ಲ | <1% | <1% |
| ಟೆಟ್ಯಾನಸ್ | 10% | 10% | 25% |
| ಹೆಪಟೈಟಿಸ್ ಬಿ | ವಯಸ್ಕರಿಗೆ 15% ಮಕ್ಕಳಲ್ಲಿ 5% | 1%-6% | ಇಲ್ಲ |

### 1 ಏಕೆ ಆರೋಗ್ಯದಲ್ಲಿ ತುಸು ವ್ಯತ್ಯಾಸ ಕಾಣಿಸಿಕೊಳ್ಳಬಹುದು?

- ಯಾವುದೇ ಪ್ರತಿಜನಕವಿರಲಿ, ದೇಹದಲ್ಲಿ ಅದು ಪ್ರವೇಶಿಸುತ್ತಿದ್ದಂತೆಯೇ ಮಂದ ಪ್ರಮಾಣದ ಅಡ್ಡ ಪರಿಣಾಮಗಳು ಕಾಣಿಸಿಕೊಳ್ಳಬಹುದು.
- ಆದರೆ ಲಸಿಕೆಗಳಲ್ಲಿ ಕೇವಲ ಪ್ರತಿಜನಕಗಳಷ್ಟೇ ಅಲ್ಲದೇ, ಹೆಚ್ಚುವರಿ ಪೂರಕ ಅಂಶಗಳೂ ಇರುತ್ತವೆ. ಉದಾಹರಣೆಗೆ ರೋಗ ನಿರೋಧಕ ಶಕ್ತಿಗೆ ಮತ್ತಷ್ಟು ಪ್ರಚೋದನೆ ನೀಡುವ ನಿಟ್ಟಿನಲ್ಲಿ ಅಲ್ಯುಮಿನಿಯಮ್ ಆಧರಿತ ರಾಸಾಯನಿಕಗಳನ್ನು ಬಳಸಿರಬಹುದು, ಜತೆಗೆ ಲಸಿಕೆಯನ್ನು ಭದ್ರವಾಗಿಡಲು ಸಂರಕ್ಷಕಗಳು ಮತ್ತು ಸ್ಥಿರೀಕಾರಕಗಳನ್ನು ಬಳಸಲಾಗಿರುತ್ತದೆ. ಇವುಗಳಿಂದಲೂ ಕೆಲವೊಮ್ಮೆ ರಿಯಾಕ್ಷನ್ನುಗಳು ಕಾಣಿಸಿಕೊಳ್ಳಬಹುದು.

### 2 ಯಾವ ಲಕ್ಷಣಗಳು ಅಪಾಯಕಾರಿಯಲ್ಲ?

- ಲಸಿಕೆಯ ನಂತರ ಕಾಣಿಸಿಕೊಳ್ಳುವ ಪ್ರತಿಕೂಲ ಪರಿಣಾಮ(ಎಇಎಫ್ಐ) ರೋಗಿಯ ಆರೋಗ್ಯಕ್ಕೆ ಸಂಭಾವ್ಯ ಅಪಾಯ ಎದುರೊಡ್ಡದಿದ್ದರೆ ಅದನ್ನು 'ಗಂಭೀರವಲ್ಲದ' ಪರಿಣಾಮ ಎಂದು ಪರಿಗಣಿಸಲಾಗುತ್ತದೆ.
- ಕೋವಿಡ್-19 ಲಸಿಕೆಗಳ ವಿಚಾರಕ್ಕೆ ಬರುವುದಾದರೆ, ಇಂಥ ಗಂಭೀರವಲ್ಲದ ಲಕ್ಷಣಗಳೆಂದರೆ ನೋವು, ಇಂಜೆಕ್ಷನ್ ಕೊಟ್ಟ ಸ್ಥಳದಲ್ಲಿ ತುಸು ಬಾವು, ಅಲ್ಪ ಜ್ವರ, ಮೈಕೈನೋವು, ವಾಕರಿಕೆಯಂಥ ಲಕ್ಷಣಗಳನ್ನು ಸರ್ಕಾರ ಗಂಭೀರವಲ್ಲದ ಲಕ್ಷಣಗಳೆಂದು ಗುರುತಿಸಿದೆ.
- ಆದರೆ ಗಂಭೀರವಲ್ಲದ ಎಇಎಫ್ಐ ಲಕ್ಷಣಗಳನ್ನೂ ಎಚ್ಚರಿಕೆಯಿಂದ ಗಮನಿಸಬೇಕೆಂದು ವೈಜ್ಞಾನಿಕ ವಲಯ ಸಲಹೆ ನೀಡುತ್ತದೆ. ಏಕೆಂದರೆ, ಅವು ಯಾವುದೋ ದೊಡ್ಡ ಸಮಸ್ಯೆಯ ಲಕ್ಷಣಗಳಾಗಿರಬಹುದು.

### 3 ಗಂಭೀರ ಪ್ರತಿಕೂಲ ಪರಿಣಾಮಗಳು ಯಾವುವು?

- ಜೀವಕ್ಕೆ ಕುತ್ತುತರುವಂಥ ಅಥವಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಂಥ ಸನ್ನಿವೇಶಕ್ಕೆ ದೂಡುವ ಸಮಸ್ಯೆಗಳು, ಅಂಗಾಗವೈಫಲ್ಯಕ್ಕೆ ಕಾರಣವಾಗುವಂಥ ಪರಿಣಾಮಗಳನ್ನು ಗಂಭೀರ ಎಇಎಫ್ಐಗಳು ಎನ್ನಲಾಗುತ್ತದೆ.
- ಕೋವಿಡ್ ಲಸಿಕೆಗಳ ವಿಚಾರಕ್ಕೆ ಬರುವುದಾದರೆ, ಎಲ್ಲೂ ಇಂಥ ಗಂಭೀರ ಪರಿಣಾಮ ದಾಖಲಾಗಿಲ್ಲ.

ಸಂಯುಕ್ತ ಕರ್ನಾಟಕ

# 5,410 ಮಂದಿಗೆ ಕೋವಿಡ್ ಲಸಿಕೆ

**ಸಂ.ಕ.ಸಮಾಚಾರ ಬೆಂಗಳೂರು**

ಸರ್ಕಾರಿ ಹಾಗೂ ಪಾಲಿಕೆಯ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ 92 ಖಾಸಗಿ ಆಸ್ಪತ್ರೆಗಳಲ್ಲಿ ಒಟ್ಟು 5,410 ಜನರಿಗೆ ಕೋವಿಡ್ ಲಸಿಕೆ ತೆಗೆದುಕೊಂಡಿದ್ದಾರೆ.

ಗುರುವಾರ ಒಟ್ಟು 10,469 ಜನರಿಗೆ ಲಸಿಕೆ ನೀಡಲು ಉದ್ದೇಶಿಸಲಾಗಿತ್ತು. ಆದರೆ, ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಗುರುವಾರವೂ ಆರೋಗ್ಯ ಕಾರ್ಯಕರ್ತರು ಹಿಂದೇಟು ಹಾಕಿದ್ದಾರೆ.

ಕೋವಿನ್ ಪೋರ್ಟಲ್‌ನಲ್ಲಿ ಕೋವಿಡ್ ಲಸಿಕೆಗೆ ಹೆಸರು ದಾಖಲಿಸಿಕೊಂಡಿದ್ದ 10,469 ಆರೋಗ್ಯ ಕಾರ್ಯಕರ್ತರಲ್ಲಿ ಸರ್ಕಾರಿ ಹಾಗೂ ಪಾಲಿಕೆಯ 2,328 ಆರೋಗ್ಯ ಕಾರ್ಯಕರ್ತರು ಹಾಗೂ ಖಾಸಗಿ ಆಸ್ಪತ್ರೆಯ 8,141 ಜನ ಇದ್ದರು. ಇವರಲ್ಲಿ ಕ್ರಮವಾಗಿ 1027 ಹಾಗೂ 4,282 ಜನ ಲಸಿಕೆ ಹಾಕಿಸಿಕೊಂಡಿದ್ದು, ಶೇ.52ರಷ್ಟು ಗುರಿ ಸಾಧಿಸಿದಂತಾಗಿದೆ.

ನಗರದಲ್ಲಿ ಗುರುವಾರ ಕೋವಿಡ್ ಲಸಿಕೆ ಹಾಕಿಸಿಕೊಂಡವರಲ್ಲಿ 23 ಜನರಿಗೆ ಅಡ್ಡಪರಿಣಾಮ ಕಾಣಿಸಿಕೊಂಡಿದೆ. ಪಶ್ಚಿಮ ವಲಯದಲ್ಲಿ 1,428 ಜನ ಆರೋಗ್ಯ ಕಾರ್ಯಕರ್ತರು ಲಸಿಕೆ ಹಾಕಿಸಿಕೊಂಡಿದ್ದು, ಇವರಲ್ಲಿ 22 ಜನರಿಗೆ ಅಡ್ಡಪರಿಣಾಮ ಕಾಣಿಸಿಕೊಂಡಿದೆ. ಇನ್ನು, ದಕ್ಷಿಣ ವಲಯದ ಒಬ್ಬರು ಆರೋಗ್ಯ ಕಾರ್ಯಕರ್ತರಲ್ಲೂ ಅಡ್ಡಪರಿಣಾಮ ಕಾಣಿಸಿಕೊಂಡಿದೆ.

> “ಲಸಿಕೆ ಹಾಕಿಸಿಕೊಂಡ ಕೆಲವರಲ್ಲಿ ಜ್ವರ ಹಾಗೂ ಮೈಕೈ ನೋವು ಲಕ್ಷಣಗಳು ಕಾಣಿಸಿಕೊಂಡಿವೆ. ಉಳಿದಂತೆ ಯಾರಿಗೂ ಹೆಚ್ಚಿನ ತೊಂದರೆ ಆಗಿಲ್ಲ. ಎಲ್ಲರೂ ಕ್ಷೇಮವಾಗಿದ್ದಾರೆ.
>
> ■ **ಮಂಜುನಾಥ್ ಪ್ರಸಾದ್**
>
> | ಪಾಲಿಕೆ ಆಯುಕ್ತ

ಸಂಯುಕ್ತ ಕನಾ

ಸಂಯುಕ್ತ ಕರ್ನಾಟಕ

# ಏಕೀಕೃತ ಜನಸಂಪರ್ಕ ಆ್ಯಪ್

**ಸಂ.ಕ.ಸಮಾಚಾರ ಬೆಂಗಳೂರು**

ಬಿಬಿಎಂಪಿ ವ್ಯಾಪ್ತಿಯಲ್ಲಿ ಸಾರ್ವಜನಿಕರ ಕುಂದು-ಕೊರತೆ ಹಾಗೂ ವಿವಿಧ ಸೌಲಭ್ಯಗಳನ್ನು ಒಂದೇ ವೇದಿಕೆಯಲ್ಲಿ ನೀಡುವ ನಿಟ್ಟಿನಲ್ಲಿ ಪಾಲಿಕೆಯ ಐಟಿ ವಿಭಾಗ 'ಯೂನಿಫೈಡ್ ಡಿಜಿಟಲ್ ಫ್ಲಾಟ್‌ಫಾರ್ಮ್' (ಒಂದೇ ಸೂರಿನಡಿ ಎಲ್ಲ ಸೌಲಭ್ಯ) ಅಭಿವೃದ್ಧಿಪಡಿಸುತ್ತಿದೆ.

ಸರ್ಕಾರದ ಮಿಷನ್ 2022ರ ಭಾಗವಾಗಿ 'ಏಕೀಕೃತ ಜನಸಂಪರ್ಕ ವೇದಿಕೆ' ಆ್ಯಪ್ ಸಿದ್ಧತೆ ಪಡಿಸುವುದಕ್ಕೆ ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳು ಪಾಲಿಕೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದು ಈ ಕಾರ್ಯ ವೇಗ ಪಡೆದುಕೊಂಡಿದೆ.

ನಗರದಲ್ಲಿ ಯಾವುದಾದರು ನಿರ್ದಿಷ್ಟ ಸಮಸ್ಯೆಗೆ ಸಂಬಂಧಿಸಿದಂತೆ ದೂರು ನೀಡಲು ಸಹಾಯ 2.0 ಆ್ಯಪ್ ಇದೆ. ಇದರಲ್ಲಿ ದೂರು ಮಾತ್ರ ನೀಡಬಹುದು. ಆದರೆ, ಪಾಲಿಕೆಯ ವಿವಿಧ ಸೇವೆಗಳನ್ನು ಬಳಸಬೇಕಾದರೆ ಪ್ರತ್ಯೇಕವಾಗಿ ಲಾಗಿನ್ ಆಗಬೇಕು ಅಥವಾ ಮಾಹಿತಿ ಹಾಗೂ ವಿವರ ಬೇಕಾದರೆ ಪಾಲಿಕೆಯ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಬೇಕು. ಹೀಗಾಗಿ, ಎಲ್ಲ ವಿಭಾಗದ ದೂರು ಹಾಗೂ ಸೇವೆಗೆ 'ಏಕೀಕೃತ ಜನ ಸಂಪರ್ಕ ವೇದಿಕೆ' ಆ್ಯಪ್ ಸಿದ್ಧಪಡಿಸಲಾಗುತ್ತಿದೆ. ಸಾರ್ವಜನಿಕರಿಗೆ ಹೊಸ ಆ್ಯಪ್‌ನ ಮೂಲಕ ನೆಟ್‌ಬ್ಯಾಂಕಿಂಗ್ ಮಾದರಿಯಲ್ಲಿ ಹೆಸರು ಹಾಗೂ ಪಾಸ್‌ವರ್ಡ್ ಸಿಗಲಿದೆ. ಇದರಿಂದ ಎಲ್ಲ ರೀತಿಯ ಮಾಹಿತಿ ಸಿಗಲಿದೆ. ಅದರ ಪ್ರಗತಿ ವಿವರವೂ ಕಾಣಿಸಲಿದೆ.

ಮೊದಲ ಹಂತದಲ್ಲಿ ಖಾತೆ, ಆಸ್ತಿ ತೆರಿಗೆ ಪಾವತಿ, ಜನನ ಹಾಗೂ ಮರಣ ಪ್ರಮಾಣ ಪತ್ರಗಳ ವಿವರಣೆ, ವ್ಯಾಪಾರ ಪರವಾನಗಿ ಹಾಗೂ ಹಳೆಯ ಉದ್ಯಮ ಪರವಾನಗಿ ನವೀಕರಣ, ವಿದ್ಯುತ್ ಚಿತಾಗಾರ ಮಾಹಿತಿ ಲಭ್ಯವಾಗಲಿದೆ ಎಂದು ಪಾಲಿಕೆಯ ಐಟಿ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

> “ನಗರದ ನಾಗರಿಕರಿಗೆ ಅತ್ಯಂತ ಸರಳವಾಗಿ ಹಾಗೂ ಒಂದೇ ಸೂರಿನಡಿ ಎಲ್ಲ ಸೇವೆ ನೀಡುವ ನಿಟ್ಟಿನಲ್ಲಿ ಇಂತಹ ವಿನೂತನ ಆ್ಯಪ್ ಸಿದ್ಧಪಡಿಸಲಾಗುತ್ತಿದೆ.
>
> ■ **ರಾಜೇಂದ್ರ ಚೋಳನ್**
> | ಪಾಲಿಕೆ ವಿಶೇಷ ಆಯುಕ್ತ

ಸಂಯುಕ್ತ ಕರ್ನಾಟಕ Fri, 22 January 2021
epaper.samyukthakarnataka.com/c/57892468

ಸಂಯುಕ್ತ ಕರ್ನಾಟಕ

# 674 ಮಂದಿಗೆ ಸೋಂಕು



**ಬೆಂಗಳೂರು:** ರಾಜ್ಯದಲ್ಲಿ ಶುಕ್ರವಾರ ಕೊರೊನಾ ಸೋಂಕಿತರ ಸಂಖ್ಯೆ ಇಳಿಮುಖವಾಗಿದ್ದು ಹೊಸದಾಗಿ 674 ಜನರಿಗೆ ಸೋಂಕು ತಗುಲಿರುವುದು ದೃಢವಾಗಿದೆ. ಈ ಮೂಲಕ ಸೋಂಕಿತರ ಸಂಖ್ಯೆ 9,34,252ಕ್ಕೆ ಏರಿಕೆಯಾಗಿದೆ. 815 ಮಂದಿ ಗುಣಮುಖರಾಗಿ ಬಿಡುಗಡೆಯಾಗಿದ್ದು ಇದುವರೆಗೆ 9,14,492 ಜನ ಗುಣಮುಖರಾಗಿ ಡಿಸ್ಚಾರ್ಜ್ ಆಗಿದ್ದಾರೆ. ಸೋಂಕಿಗೆ ರಾಜ್ಯದಲ್ಲಿ ಇಬ್ಬರು ಸೋಂಕಿತರು ಮೃತಪಟ್ಟಿದ್ದು ಇದುವರೆಗೆ 12,187 ಜನ ಸಾವನ್ನಪ್ಪಿದ್ದಾರೆ. ಬೆಂಗಳೂರಿನಲ್ಲಿ ಕಳೆದ 24 ಗಂಟೆಗಳಲ್ಲಿ 371 ಜನರಿಗೆ ಸೋಂಕು ದೃಢವಾಗಿದ್ದು 509 ಜನ ಗುಣಮುಖರಾಗಿ ಬಿಡುಗಡೆಯಾಗಿದ್ದು, ಇದುವರೆಗೆ 3,86,769 ಜನ ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಸಂಯುಕ್ತ ಕರ್ನಾಟಕ Fri, 22 Jan
epaper.samy

ಹೊಸ ದಿಗಂತ

# 2ನೇ ಹಂತದಲ್ಲಿ ಪ್ರಧಾನಿ, ಮುಖ್ಯಮಂತ್ರಿಗಳಿಗೆ ಲಸಿಕೆ

**ಹೊಸದಿಲ್ಲಿ:** ಜನವರಿ 16ರಂದು ದೇಶಾದ್ಯಂತ ಚಾಲನೆ ನೀಡಲಾಗಿರುವ ಕೊರೋನಾ ಲಸಿಕೆ ಅಭಿಯಾನದ ಎರಡನೇ ಹಂತದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿಗಳು ಲಸಿಕೆ ಪಡೆಯಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಅದೇ ರೀತಿ 50 ವರ್ಷಕ್ಕಿಂತ ಮೇಲ್ಪಟ್ಟ ಇತರೆ ರಾಜಕಾರಣಿಗಳಿಗೆ ಮುಂದಿನ ಹಂತದಲ್ಲಿ ಲಸಿಕೆ ನೀಡಲಾಗುವುದು ಎಂದು ಮುಖ್ಯಮಂತ್ರಿಗಳೊಂದಿಗಿನ ಸಭೆಯಲ್ಲಿ ಪ್ರಧಾನಿ ಮೋದಿ ತಿಳಿಸಿದ್ದರು.

ಆರೋಗ್ಯ ಕಾರ್ಯಕರ್ತರು ಮತ್ತು ಪೊಲೀಸ್, ಸಶಸ್ತ್ರ ಪಡೆಗಳು, ಪೌರ ಕಾರ್ಮಿಕರಂತಹ ಮುಂಚೂಣಿ ಕಾರ್ಯಕರ್ತರ ಬಳಿಕ 50 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡಲಾಗುವುದು. ನಂತರ ಮುಂದಿನ ದಿನಗಳಲ್ಲಿ ಮಧುಮೇಹ, ಹೃದಯ ಸಂಬಂಧಿ ಸಮಸ್ಯೆ, ಅಧಿಕ ರಕ್ತದೊತ್ತಡ ಸೇರಿದಂತೆ ಇತರೆ ಸಮಸ್ಯೆಗಳಿಂದ ಬಳಲುತ್ತಿರುವ 50 ವರ್ಷಕ್ಕಿಂತಲೂ ಕಡಿಮೆ ವಯಸ್ಸಿನವರಿಗೆ ಲಸಿಕೆ ನೀಡಲಾಗುತ್ತದೆ ಎಂದು ಮೂಲಗಳು ಹೇಳಿವೆ.




ಕಳೆದ ನವೆಂಬರ್ 24ರಂದು ಮೋದಿ ಅವರು ಮುಖ್ಯಮಂತ್ರಿಗಳೊಂದಿಗೆ ನಡೆದ ಸಭೆಯಲ್ಲಿ ಲಸಿಕೆಯ ತಾತ್ಕಾಲಿಕ ಆದ್ಯತೆ ಕುರಿತು ಚರ್ಚಿಸಲಾಗಿದೆ. 50 ವರ್ಷ ಮೇಲ್ಪಟ್ಟ ಗುಂಪಿನವರನ್ನು ಹಿರಿಯ ನಾಗರಿಕರ ವರ್ಗದವರೊಂದಿಗೆ ಸೇರ್ಪಡಿಸಿ ಆದಷ್ಟು ಬೇಗ ಲಸಿಕೆ ನೀಡುವ ಕುರಿತೂ ಸಹ ಚರ್ಚೆ ನಡೆಯುತ್ತಿದೆ.

ಹೊಸ ದಿಗಂತ

# ಕುಂದು-ಕೊರತೆ ಆಲಿಕೆಗೆ ಶೀಘ್ರ ಆ್ಯಪ್ ಬಿಡುಗಡೆ

**ಬೆಂಗಳೂರು:** ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸುವಿಕೆ ಹಾಗೂ ವಿವಿಧ ಸೌಲಭ್ಯಗಳನ್ನು ಒದಗಿಸಲು ಬಿಬಿಎಂಪಿ ತಾಂತ್ರಿಕ ವಿಭಾಗ ಮೊಬೈಲ್ ಆ್ಯಪ್ ಬಿಡುಗಡೆ ಮಾಡಲು ಮುಂದಾಗಿದೆ.

ಯೂನಿಫೈಡ್ ಡಿಜಿಟಲ್ ಪ್ಲಾಟ್‌ಫಾರ್ಮ್ ಅಭಿವೃದ್ಧಿಪಡಿಸಲು ಪಾಲಿಕೆಯ ಅಧಿಕಾರಿಗಳು ಐಟಿ ವಿಭಾಗಕ್ಕೆ ನಿರ್ದೇಶನ ನೀಡಿದ್ದಾರೆ. ಬಿಬಿಎಂಪಿ ಸೌಲಭ್ಯ ಹಾಗೂ ಜನರ ಸಮಸ್ಯೆಗಳಿಗಾಗಿ ಒಂದೇ ವೇದಿಕೆಯಲ್ಲಿ ಉತ್ತರ ಒದಗಿಸುವ ನಿಟ್ಟಿನಲ್ಲಿ ಈ ಆ್ಯಪ್ ಸಿದ್ಧಪಡಿಸಲಾಗುತ್ತಿದ್ದು ಇದಕ್ಕೆ ನಗರಾಭಿವೃದ್ಧಿ ಇಲಾಖೆ ಪಾಲಿಕೆಗೆ ಸಲಹೆ ನೀಡಿದೆ. ಈಗಾಗಲೇ ದೂರು ನೀಡಲು ಸಹಾಯ 2.0 ಚಾಲ್ತಿಯಲ್ಲಿದೆ. ಆದರೆ, ಬಿಬಿಎಂಪಿ ಸೌಲಭ್ಯವನ್ನು ಬಳಸಬೇಕಾದರೆ ಪಾಲಿಕೆಯ ವೆಬ್‌ಸೈಟ್‌ಗೆ ಭೇಟಿ ನೀಡಬೇಕು. ಹೀಗಾಗಿ, ಎಲ್ಲ ವಿಭಾಗದ ದೂರು ಹಾಗೂ ಸೇವೆಗೆ ಏಕೀಕೃತ ಜನ ಸಂಪರ್ಕ ಆ್ಯಪ್ ಸಿದ್ಧಪಡಿಸಲಾಗುತ್ತಿದೆ. ಮೊದಲ ಹಂತದಲ್ಲಿ ಖಾತೆ, ಆಸ್ತಿ ತೆರಿಗೆ ಪಾವತಿ, ಜನನ ಹಾಗೂ ಮರಣ ಪ್ರಮಾಣಪತ್ರಗಳ ವಿವರಣೆ, ವ್ಯಾಪಾರ ಪರವಾನಗಿ ಹಾಗೂ ಹಳೆಯ ಉದ್ಯಮ ಪರವಾನಗಿ ನವೀಕರಣ, ವಿದ್ಯುತ್ ಚಿತಾಗಾರ ಕುರಿತು ಮಾಹಿತಿ ಲಭ್ಯವಾಗಲಿದೆ. ಬಿಎಂಪಿಯ ಕಾರ್ಯಚಟುವಟಿಕೆಯೂ ಇದರಲ್ಲಿ ಸಿಗಲಿದೆ.

ಹೊಸ ದಿಗಂತ

# ಬಸವನಪುರ ಕೆರೆ ಸರ್ವೇಗೆ ಹೈಕೋರ್ಟ್ ಆದೇಶ

**ಬೆಂಗಳೂರು:** ಬಸವನಪುರ ಕೆರೆಯ ವಿಸ್ತೀರ್ಣ ಹಾಗೂ ಬಫರ್ ಝೋನ್ ಸರ್ವೇ ನಡೆಸಿ ವರದಿ ಸಲ್ಲಿಸುವಂತೆ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ. ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಗುರುವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಈ ನಿರ್ದೇಶನ ನೀಡಿತು.ಕಂದಾಯ ಇಲಾಖೆಯ ಅಧಿಕಾರಿಯೊಬ್ಬರನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿ ನೇಮಿಸ ಬೇಕು. ಆ ಅಧಿಕಾರಿ ಸ್ಥಳ ಪರಿಶೀಲನೆ ನಡೆ ಸುವ ಮುನ್ನ ಅರ್ಜಿದಾರರ ಗಮನಕ್ಕೆ ತಂದು ಸರ್ವೇ ನಡೆಸಬೇಕು. ಕೆರೆ ಪ್ರದೇಶ ಒತ್ತುವರಿಯಾಗಿರುವುದು ಕಂಡುಬಂದರೆ ಅದರ ತೆರವಿಗೆ ಯಾವ ಕ್ರಮ ಕೈಗೊಳ್ಳಲಾಗುತ್ತದೆ ಎಂಬ ಬಗ್ಗೆ ಮುಂದಿನ ವಿಚಾರಣೆ ವೇಳೆ ಕೋರ್ಟ್‌ಗೆ ವರದಿ ಸಲ್ಲಿಸಬೇಕು ಸೂಚಿಸಿದ ಪೀಠ ಫೆ.24ಕ್ಕೆ ವಿಚಾರಣೆ ಮುಂದೂಡಿದೆ.

ಸಂಜೆವಾಣಿ
1982

# ಅನಧಿಕೃತ ನಿರ್ಮಾಣ ವರದಿಗೆ ಬಿಬಿಎಂಪಿ ಆಯುಕ್ತರ ಸೂಚನೆ

ಬೆಂಗಳೂರು, ಜ.21–ಸರ್ಕಾರಿ ಜಾಗ ಸೇರಿದಂತೆ ಸಾರ್ವಜನಿಕ ಸ್ಥಳಗಳನ್ನು ಅತಿಕ್ರಮಿಸಿ ಅನಧಿಕೃತವಾಗಿ ನಿರ್ಮಿಸಿರುವ ಮಂದಿರ, ಮಸೀದಿ, ಚರ್ಚ್, ಗುರುದ್ವಾರ ಸೇರಿದಂತೆ ಧಾರ್ಮಿಕ ಕಟ್ಟಡಗಳನ್ನು 3 ದಿನಗಳಲ್ಲಿ ಸಮೀಕ್ಷೆ ಮಾಡಿ ಸಮಗ್ರ ವರದಿ ನೀಡಬೇಕೆಂದು ಅಧಿಕಾರಿಗಳಿಗೆ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ಸೂಚನೆ ನೀಡಿದ್ದಾರೆ.





ನಗರದ ಬಿಬಿಎಂಪಿ ಕೇಂದ್ರ ಕಚೇರಿಯ ವಾರ್ ರೂಂನಲ್ಲಿ ಅಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸಿದ ಅವರು, ಬಿಬಿಎಂಪಿ ವ್ಯಾಪ್ತಿಯ ರಸ್ತೆ, ಪಾದಚಾರಿ ಮಾರ್ಗ, ಉದ್ಯಾನ, ಆಟದ ಮೈದಾನ, ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ನಿರ್ಮಿಸಿರುವ ಬಗ್ಗೆ 2009ರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಪಿ.ಐ.ಎಲ್ ದಾಖಲಿಸಲಾಗಿದೆ.

ಇದು ಕೇವಲ ಬಿಬಿಎಂಪಿಗೆ ಮಾತ್ರವಲ್ಲದೆ ದೇಶಕ್ಕೆ ಅನ್ವಯವಾಗಲಿದೆ. ಈ ಪೈಕಿ 2009ರ ಸೆ.29ರಂದು ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಧಾರ್ಮಿಕ ಕಟ್ಟಡಗಳ ಬಗ್ಗೆ ಸಮೀಕ್ಷೆ ನಡೆಸಿ ವರದಿ ನೀಡಬೇಕೆಂಬ ಆದೇಶವಾಗಿದೆ ಎಂದರು.

ಈ ಆದೇಶದಲ್ಲಿ 2009ರ ಮುನ್ನ ನಿರ್ಮಿಸಿರುವ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ಬೇರೆಡೆ ಸ್ಥಳಾಂತರ/ತೆರವುಗೊಳಿಸುವ ಕಾರ್ಯ ಮಾಡಬೇಕು. 2009ರ ಸೆ.29ರ ನಂತರ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ರೀತಿಯ ಧಾರ್ಮಿಕ ಕಟ್ಟಡಗಳನ್ನು ನಿರ್ಮಿಸುವಂತಿಲ್ಲ ಎಂಬ ಆದೇಶವಿದೆ ಎಂದು ಮಂಜುನಾಥ್ ಪ್ರಸಾದ್ ತಿಳಿಸಿದರು.

ಸರ್ಕಾರಿ ಹಾಗೂ ಖಾಸಗಿ ಜಾಗದಲ್ಲಿ ಧಾರ್ಮಿಕ ಕಟ್ಟಡಗಳನ್ನು ನಿರ್ಮಿಸಲಾಗಿರುತ್ತದೆ. ಈ ಪೈಕಿ ಖಾಸಗಿ ಜಾಗದಲ್ಲಿ ನಿರ್ಮಿಸಿರುವ ಧಾರ್ಮಿಕ ಕಟ್ಟಡಗಳನ್ನು ಹೊರತುಪಡಿಸಿ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡು ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಧಾರ್ಮಿಕ ಕಟ್ಟಡಗಳ ಪಟ್ಟಿಯನ್ನು ಸಿದ್ಧಪಡಿಸಬೇಕು.

ಈ ಸಂಬಂಧ 2009ರ ಮುನ್ನ ಹಾಗೂ 2009ರ ನಂತರ ನಿರ್ಮಿಸಲಾದ ಧಾರ್ಮಿಕ ಕಟ್ಟಡಗಳನ್ನು ಎಲ್ಲ ವಾರ್ಡ್ ಇಂಜಿನಿಯರ್ ಹಾಗೂ ಕಂದಾಯ ಅಧಿಕಾರಿಗಳು ಸಮರ್ಪಕವಾಗಿ ಸಮೀಕ್ಷೆ ನಡೆಸಿ 3 ದಿನಗಳಲ್ಲಿ ನಿಖರವಾದ ಪಟ್ಟಿಯನ್ನು ಸಿದ್ಧಪಡಿಸಿ ವರದಿ ನೀಡಬೇಕು ಎಂದು ಅವರು ಸೂಚನೆ ನೀಡಿದರು.

ಇದೇ ಜ.28ರಂದು ಧಾರ್ಮಿಕ ಕಟ್ಟಡಗಳ ವಿಚಾರವಾಗಿ ಹೈಕೋರ್ಟ್‌ನಲ್ಲಿ ವಿಚಾರಣೆಯಿದ್ದು, ಈ ವಿಚಾರಣೆಯಲ್ಲಿ ನಿಖರವಾದ ಮಾಹಿತಿ ನೀಡಬೇಕು. ಅನಧಿಕೃತವಾಗಿ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಿಸಿರುವ ಧಾರ್ಮಿಕ ಕಟ್ಟಡಗಳ ಸಮೀಕ್ಷೆಯು ಅತ್ಯಂತ ಗಂಭೀರವಾದ ವಿಚಾರವಾಗಿದೆ.

ಆದುದರಿಂದ, ಯಾವ ಅಧಿಕಾರಿಯೂ ಇದನ್ನು ಕಡೆಗಣಿಸುವಂತಿಲ್ಲ. ಪಾಲಿಕೆಯ ಎಲ್ಲ 8 ವಲಯಗಳ ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತ ಧಾರ್ಮಿಕ ಕಟ್ಟಡಗಳ ಪಟ್ಟಿಮಾಡಿ ವರದಿ ನೀಡಬೇಕು. ಜೊತೆಗೆ 2009ರ ನಂತರ ನಿರ್ಮಿಸಿರುವ ಧಾರ್ಮಿಕ ಕಟ್ಟಡಗಳಿಗೆ 27ರೊಳಗೆ ನೋಟಿಸ್ ಜಾರಿ ಮಾಡಿ ಧಾರ್ಮಿಕ ಕಟ್ಟಡಗಳು ನಿರ್ಮಿಸಿರುವವರಿಂದ 1 ವಾರದಲ್ಲಿ ಆ ಬಗ್ಗೆ ಸಮಜಾಯಿಷಿ ಪಡೆಯಬೇಕು ಎಂದು ಅವರು ಸೂಚನೆ ನೀಡಿದರು.

ಧಾರ್ಮಿಕ ಕಟ್ಟಡಗಳ ಸಮೀಕ್ಷೆಯನ್ನು ಎಲ್ಲ ಅಧಿಕಾರಿಗಳು ಒಂದೇ ಮಾದರಿಯಲ್ಲಿ ಮಾಡಬೇಕು. ವಲಯದ ಹೆಸರು, ದೇವಸ್ಥಾನ, ಚರ್ಚ್, ಮಸೀದಿ, ಗುರುದ್ವಾರದ ಹೆಸರು, ಯಾವ ವಾರ್ಡ್ ಮತ್ತು ವಾರ್ಡ್ ಸಂಖ್ಯೆ, ವಿಳಾಸ, ಧಾರ್ಮಿಕ ಕಟ್ಟಡಗಳನ್ನು 2009ರ ಮುನ್ನ ಹಾಗೂ 2009ರ ನಂತರ ನಿರ್ಮಾಣ ಮಾಡಿರುವ ಬಗ್ಗೆ ಹಾಗೂ ಎಷ್ಟು ಅಳತೆಯಲ್ಲಿ ದೇವಸ್ಥಾನವಿದೆ ಎಂಬ ಜಾಗದ ಅಂದಾಜು ಮಾಹಿತಿಯನ್ನು ನೀಡಬೇಕು ಎಂದು ಅವರು ಹೇಳಿದರು.

ಈ ಸಂಬಂಧ ಒಂದು ಮಾದರಿ(ಫಾರ್ಮೆಟ್) ನೀಡಲಾಗುತ್ತದೆ. ಅದರಂತೆ ಸಮೀಕ್ಷೆ ನಡೆಸಿ ಸಮಗ್ರ ಮಾಹಿತಿಯನ್ನು ತ್ವರಿತವಾಗಿ ಸಿದ್ಧಪಡಿಸಿಕೊಡಬೇಕು. ಪಟ್ಟಿ ಮಾಡಿರುವ ಧಾರ್ಮಿಕ ಕಟ್ಟಡಗಳ ಛಾಯಾಚಿತ್ರಗಳನ್ನು ಕೂಡಾ ವರದಿಯಲ್ಲಿ ಲಗತ್ತಿಸಿರಬೇಕು. ಹೈಕೋರ್ಟ್‌ಗೆ ವರದಿ ಸಲ್ಲಿಸಿದ ನಂತರ ಪೊಲೀಸ್ ಇಲಾಖೆಯ ಭದ್ರತೆಯೊಂದಿಗೆ ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ತೆರವುಗೊಳಿಸಲು ಕ್ರಮವಹಿಸಬೇಕು ಎಂದು ಮಂಜುನಾಥ್ ಪ್ರಸಾದ್ ತಿಳಿಸಿದರು.

ಈ ವೇಳೆ ಬಿಬಿಎಂಪಿ ವಿಶೇಷ ಆಯುಕ್ತರಾದ ಜೆ.ಮಂಜುನಾಥ್, ಬಸವರಾಜ್, ರಾಜೇಂದ್ರ ಚೋಳನ್, ರವೀಂದ್ರ, ತುಳಸಿ ಮದ್ದಿನೇನಿ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.